# ಯೇಸುಕ್ರಿಸ್ತನ ಸಭೆ

## ಭಾಗ – 1

## ಅಧ್ಯಯನ # 17




## ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

"ನಿನ್ನ ವಾಕ್ಯವೇ ಸತ್ಯವು" - ಯೋಹಾನನು 17:17

# ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

## ಅಧ್ಯಯನ # 17

## ಯೇಸುಕ್ರಿಸ್ತನ ಸಭೆ ಭಾಗ-1

**<u>ದಯವಿಟ್ಟು ಗಮನಿಸಿ:</u> ಈ ತರಗತಿಯಲ್ಲಿ ತಿಳಿಸಲಾಗಿರುವ ಎಲ್ಲಾ ವಾಕ್ಯಗಳನ್ನು ಸತ್ಯವೇದದಲ್ಲಿ ಓದುವ ಮೂಲಕ ನಿಮ್ಮ ಅಭ್ಯಾಸವನ್ನು ಮುಂದುವರಿಸಿರಿ.**

*ಇಲ್ಲಿ ಉಪಯೋಗಿಸಿರುವ ಅತ್ಯಧಿಕವಾದ ವಾಕ್ಯಭಾಗಗಳು(ಕೆ.ಜೆ.ವಿ) ಭಾಷಾಂತರದಿಂದ ತೆಗೆದುಕೊಳ್ಳಲಾಗಿದೆ.*

ಈ ದಿನ ನಾವು ಯೇಸು ಕ್ರಿಸ್ತನ ಸಭೆಯನ್ನು ಕುರಿತು ಅಭ್ಯಾಸ ಮಾಡಲಿದ್ದೇವೆ – ಮೊದಲ ಬಾರಿಗೆ ಯೇಸು ಸ್ವತಃ "ಆತನ ಸಭೆ"ಯ ಕುರಿತು ಮಾತನಾಡಿದನು.

**ಸಭೆ ಎಂದರೇನು?**

**ಈ ದಿನ ಸಭೆಯಲ್ಲಿ ಏಕೆ ಅನೇಕ ವಿಭಾಗಗಳು ಅಥವಾ ಪಂಗಡಗಳಿವೆ?**



**ಇವೆಲ್ಲಾ ಸಭೆಗಳು ಸೇರಿ ಯೇಸುಕ್ರಿಸ್ತನ ಸಭೆಯಾಗುತ್ತದೆಯೇ?**

## ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರವೇನು?

ಈ ಕೆಳಗಿನ ವಾಕ್ಯಗಳನ್ನು ಓದೋಣ –

**1 ಕೊರಿಂಥ 12:12,13**


“ ಹೇಗೆ ದೇಹವು ಒಂದಾಗಿದ್ದರೂ ಅದಕ್ಕಿರುವ ಅಂಗಗಳು ಅನೇಕವಾಗಿವೆಯೋ, ಹೇಗೆ ದೇಹದ ಅಂಗಗಳೆಲ್ಲವು  ಅನೇಕವಾಗಿದ್ದು ಒಂದೇ ದೇಹವಾಗಿರುವುದೋ, ಹಾಗೆಯೇ ಕ್ರಿಸ್ತನು. ಯೆಹೂದ್ಯರಾಗಲಿ ಗ್ರೀಕರಾಗಲಿ ದಾಸರಾಗಲಿ ಸ್ವತಂತ್ರರಾಗಲಿ ನಾವೆಲ್ಲರೂ ಒಂದೇ ದೇಹವಾಗುವುದಕ್ಕಾಗಿ ಒಂದೇ ಆತ್ಮನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡೆವು..”

**ಹೌದು! ಕ್ರಿಸ್ತನ ದೇಹವಾಗಿರುವ – ಸಭೆಯನ್ನು ಒಂದೇ ಎಂದು ಸೂಚಿಸಲಾಗಿದೆ !**

**ಕ್ರಿಸ್ತನ ದೇಹವಾಗಿರುವ ಸಭೆಯಲ್ಲಿ ಇರಬೇಕಾದ ಐಕತೆಯನ್ನು ನೋಡಿದ್ದೀರಾ ?**



**ಪ್ರಪಂಚದಲ್ಲಿ 37 ಮಿಲಿಯನ್ ಸಭೆಗಳಿವೆ**
**ಅದರಲ್ಲಿ 34000 (ಕ್ರೈಸ್ತ)**
**ಪಂಗಡಗಳಿವೆ.**




**ಈ ದಿನಗಳಲ್ಲಿ ಈ ಐಕತೆಯನ್ನು ನೋಡುತ್ತೇವೆಯೆ? ಇಲ್ಲವಾದರೆ ಏಕೆ?**

**ಈ ಐಕತೆಯನ್ನು ಕಾಣದಿರುವುದಕ್ಕೆ ಕಾರಣಗಳೇನು?**

**ಈ ದಿನದ ಅಭ್ಯಾಸದಲ್ಲಿ ಇದಕ್ಕೆ ಉತ್ತರವನ್ನು ನೋಡಲಿದ್ದೇವೆ !**

ನಮ್ಮ ಕರ್ತನಾದ ಯೇಸುವು ಮೊದಲ ಬಾರಿ ನುಡಿದ ಈ "ಸಭೆ” ಎಂಬ ಪದವನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದೋಣ –

**ಮತ್ತಾಯ 16:18**

“ ಈ ಬಂಡೆಯ ಮೇಲೆ ನನ್ನ ಸಭೆಯನ್ನು ಕಟ್ಟುವೆನು ”

ಹೌದು! ಯೇಸು ಮೊದಲ ಬಾರಿ ಸಭೆಯನ್ನು ಕುರಿತು ಮಾತನಾಡಿದನು!

**ಈ ಪದಗಳ ಅರ್ಥವೇನು?**

**"ಈ ಬಂಡೆಯ ಮೇಲೆ" ಎಂಬುದರ ಅರ್ಥವೇನು?**

**ಈ ದಿನಗಳಲ್ಲಿ ನಾವು ನೋಡುವಂತೆ ಸಭೆಯು ಒಂದು ಕಟ್ಟಡವೇ?**




**ಉದಾ:** ಸಂತ ಪೇತ್ರನ ಸಭೆ, ಟ್ರಿನಿಟಿ ಸಭೆ, ಎ.ಜಿ. ಸಭೆ, ಮೆಥೋಡಿಸ್ಟ್ .... ಮುಂತಾದವು



**ಈ ದಿನಗಳಲ್ಲಿ ಸಭೆಯನ್ನು ಅನೇಕ ಕ್ರೈಸ್ತರು ಕಟ್ಟಡವಾಗಿ ಸೂಚಿಸುತ್ತಾರೆ**

**ಇದು ನಿಜವೇ?**



ಈಗ "ಈ ಬಂಡೆಯ" ಎಂಬುದರ ಅರ್ಥವನ್ನು ನೋಡೋಣ:–

ರೋಮನ್ ಕ್ಯಾಥೋಲಿಕ್ ಕರು ಹಕ್ಕು ಸಾಧಿಸುವುದೇನೆಂದರೆ ಈ "ಬಂಡೆಯು" ಅಪೋಸ್ತಲನಾದ ಪೇತ್ರನು ಮತ್ತು ಯೇಸು ಅವನನ್ನು ಭೂಮಿಯಲ್ಲಿ ಸಭೆಗೆ ತಲೆಯನ್ನಾಗಿ ನೇಮಿಸಿದ್ದಾನೆ.



ಅದ್ದರಿಂದ ಎಲ್ಲಾ **ಪೋಪರು** ಸಭೆಗೆ ಮುಖ್ಯಸ್ಥರೆಂದು ಹಕ್ಕು ಸಾಧಿಸುತ್ತಾರೆ ಮತ್ತು ಪೇತ್ರನೇ ಸಭೆಗೆ **ಮೊದಲ ಮುಖ್ಯಸ್ಥನೆಂದು** ಹೇಳುತ್ತಾರೆ.

**ಇದು ನಿಜವೇ?**

ಈ ವಾಕ್ಯದ **ಸಾರಾಂಶವನ್ನು** ನಾವು ಅರ್ಥಮಾಡಿಕೊಳ್ಳಬೇಕಾದರೆ ಹಿಂದಿನ ಕೆಲವು ವಾಕ್ಯಗಳನ್ನು ಓದಬೇಕು –

## ಮತ್ತಾಯ 16:13-17

**“ ಯೇಸು ಫಿಲಿಪ್ಪನ ಕೈಸರೈಯ ಎಂಬ ಪಟ್ಟಣದ ಪ್ರಾಂತ್ಯಕ್ಕೆ ಬಂದಾಗ - ಜನರು ಮನುಷ್ಯಕುಮಾರನೆಂಬ ನನ್ನನ್ನು ಯಾರು ಅನ್ನುತ್ತಾರೆ ಎಂದು ತನ್ನ ಶಿಷ್ಯರನ್ನು ಕೇಳಿದ್ದಕ್ಕೆ ಅವರು - ನಿನ್ನನ್ನು ಕೆಲವರು ಸ್ನಾನಿಕನಾದ ಯೋಹಾನನು ಅನ್ನುತ್ತಾರೆ, ಕೆಲವರು ಎಲೀಯನು ಅನ್ನುತ್ತಾರೆ, ಬೇರೆ ಕೆಲವರು ಯೆರೇಮಿಯನು, ಇಲ್ಲವೆ ಪ್ರವಾದಿಗಳಲ್ಲಿ ಒಬ್ಬನು ಅನ್ನುತ್ತಾರೆ ಎಂದು ಹೇಳಿದರು. ಆತನು ಅವರನ್ನು - ಆದರೆ ನೀವು ನನ್ನನ್ನು ಯಾರನ್ನುತ್ತೀರಿ ಎಂದು ಕೇಳಲಾಗಿ ಸೀಮೋನ್ ಪೇತ್ರನು - ನೀನು ಬರಬೇಕಾಗಿರುವ ಕ್ರಿಸ್ತನು, ಜೀವಸ್ವರೂಪನಾದ ದೇವರ ಕುಮಾರನು ಎಂದು ಉತ್ತರಕೊಟ್ಟನು. ಅದಕ್ಕೆ ಯೇಸು - ಯೋನನ ಮಗನಾದ ಸೀಮೋನನನೇ ನೀನು ಧನ್ಯನು; ಈ ಗುಟ್ಟು ನಿನಗೆ ತಿಳಿಸಿದವನು ನರಮನುಷ್ಯನಲ್ಲ, ಪರಲೋಕದಲ್ಲಿರುವ ನನ್ನ ತಂದೆಯೇ ತಿಳಿಸಿದನು”**

ಕರ್ತನಾದ ಯೇಸು ಆತನನ್ನು ಹಿಂಬಾಲಿಸುತ್ತಿದ್ದ ಜನರ **ಗುಂಪನ್ನು** ನೋಡಿ ಯೇಸುವಿನ ಬಗ್ಗೆ ಏನು ಅಂದುಕೊಂಡಿದ್ದಾರೆಂದು ವಿಚಾರಿಸುತ್ತಾನೆ ಮತ್ತು **ಜನರಿಂದ** ಬಂದ ಉತ್ತರದಿಂದ ಅವರು ಅತನು ಯಾರು ಮತ್ತು ಆತನ ನಿಜವಾದ ಗುರುತು ಏನೆಂದು ತಿಳಿಯದೆ **ಗಲಿಬಿಲಿಯಲ್ಲಿದ್ದರು ಎಂದು ತಿಳಿದು ಬರುತ್ತದೆ.**

**ನಂತರ ಯೇಸುವಿಗೆ ಹತ್ತಿರವಿದ್ದ ತನ್ನ ಶಿಷ್ಯರ ಬಳಿ ತಾನು ಯಾರೆಂದು ಅವರು ಅಂದುಕೊಂಡಿದ್ದಾರೆಂದು ಕೇಳುತ್ತಾನೆ ?**



**ಮತ್ತು ಪೇತ್ರನು ಹೀಗೆ ಉತ್ತರಿಸುತ್ತಾನೆ –**

**“ ನೀನು ಬರಬೇಕಾಗಿರುವ ಕ್ರಿಸ್ತನು, ಜೀವಸ್ವರೂಪನಾದ ದೇವರ ಕುಮಾರನು ”**

ಹೌದು! ಪೇತ್ರನು ಉತ್ತರವಾಗಿ ಹೇಳಿದ ಈ ಮಾತಿಗೆ ಯೇಸು ಕೆಳಗಿನ ವಾಕ್ಯವನ್ನು ಹೇಳುತ್ತಾನೆ

**ಮತ್ತಾಯ 16:18**

**“ನೀನು ಪೇತ್ರನು, ಈ ಬಂಡೆಯ ಮೇಲೆ ನನ್ನ ಸಭೆಯನ್ನು ಕಟ್ಟುವೆನು”**

ಹೌದು! ಈ ಮಾತಿನಿಂದ ಯೇಸು ಪೇತ್ರನನ್ನು ಸಭೆಯ **ತಲೆಯನ್ನಾಗಿ ನೇಮಿಸಿದ್ದಾನೆ** ಎಂದುಕೊಳ್ಳುತ್ತಾರೆ!!

**ಈ ಬಂಡೆಯ ಮೇಲೆ**

ಎಂಬ ಮಾತನ್ನು ತೆಗೆದುಕೊಳ್ಳುವಾಗ ನಾವು **ಗಮನಿಸುವುದು** ಮತ್ತು ನಮಗೆ ಮನವರಿಕೆಯಾಗುವುದು ಏನೆಂದರೆ

**ಸಭೆಯನ್ನು ಕಟ್ಟುವುದು ಬಂಡೆಯ ಮೇಲೆ** ಮತ್ತು **ಬಂಡೆಯ ಕೆಳಗೆ ಅಲ್ಲ!!**

ಆದ್ದರಿಂದ **ಕರ್ತನು ಮೂಲೆಗಲ್ಲನ್ನು** ಸೂಚಿಸುತ್ತಿಲ್ಲ ಆದರೆ ಸಭೆಯು ನಿಂತುಕೊಳ್ಳುವಂತಹ ಕಲ್ಲನ್ನು ಸೂಚಿಸುತ್ತಾನೆ.

ಹೌದು!

ಇದು ಇಡೀ ಕಟ್ಟಡವನ್ನು ಹೊತ್ತುಕೊಳ್ಳುವಂತ **ಅಡಿಪಾಯ ಕಲ್ಲನ್ನು** ಸೂಚಿಸಲಾಗಿದೆ.



**ಪೇತ್ರನು ಸಭೆಗೆ ಅಡಿಪಾಯ ಕಲ್ಲಾಗಿದ್ದಾನೆಯೇ?**

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ಓದೋಣ –

**1 ಕೊರಿಂಥ 3:11**

**“ ಹಾಕಿರುವ ಅಸ್ಥಿವಾರವು ಯೇಸುಕ್ರಿಸ್ತನೇ; ಆ ಅಸ್ಥಿವಾರವನ್ನಲ್ಲದೆ ಮತ್ತೊಂದು ಅಸ್ಥಿವಾರವನ್ನು ಯಾರೂ ಹಾಕಲಾರರಷ್ಟೆ”**

ಹೌದು! ಯೇಸುವೇ ಸಭೆಯ **ಅಡಿಪಾಯ** "ಬಂಡೆ"ಯಾಗಿದ್ದಾನೆ.

**ನಿಶ್ಚಯವಾಗಿಯು ಪೇತ್ರನು ಸಭೆಯ ಭಾರವನ್ನು ಸುಮಾರು 2000 ವರ್ಷಗಳಿಂದ ಹೊತ್ತುಕೊಳ್ಳಲು ಸಾಧ್ಯವಿಲ್ಲ.**

ಆದರೆ ಅದು ಯೆಸುವಿಗೆ ಮಾತ್ರ ಸಾಧ್ಯವೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಮತ್ತಾಯ 28:20**

**" ನಾನು ನಿಮಗೆ ಅಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವುದಕ್ಕೆ ಅವರಿಗೆ ಉಪದೇಶ ಮಾಡಿರಿ. ನೋಡಿರಿ ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ ಎಂದು ಹೇಳಿದನು "**

ಪೇತ್ರನು ಕೆಲವು ವರ್ಷಗಳು ಮಾತ್ರ ಬದುಕಿದ್ದನು, ನಂತರ **ಸತ್ತನು.**

ಎಂದೆಂದಿಗೂ **ಜೀವಿಸುವಂತ ಯೇಸು ಮಾತ್ರವೇ**

ಈ ಸುವಾರ್ತಾ ಯುಗದ ಸಭೆಯನ್ನು ಸುಮಾರು **2000** ವರ್ಷಗಳಿಂದ ಹೊತ್ತುಕೊಳ್ಳಲು ಸಾಧ್ಯ!

ಇದಲ್ಲದೆ ಯೇಸುವಿನ ಮಾತನ್ನು **ಮತ್ತಾಯ** 16:18ರಲ್ಲಿ ಓದುವಾಗ

ಗ್ರೀಕ್ ಭಾಷೆಯಲ್ಲಿ ಯೇಸು ನಿಜವಾಗಿ ಏನು ಹೇಳಿದನೆಂದು ಮನವರಿಕೆಯಾಗುತ್ತದೆ.

ಆದರೆ ಇದು ಬೇರೆ ಭಾಷೆಯ ಭಾಷಾಂತರಗಳಲ್ಲಿ ಸ್ಪಷ್ಟವಾಗಿಲ್ಲ.

**ಗ್ರೀಕ್ ಭಾಷೆಯಲ್ಲಿ**

**"ನೀನು ಪೆಟ್ರೋಸ್ (ಚಿಕ್ಕ ಬಂಡೆ) ಈ ಪೆಟ್ರಾ ಮೇಲೆ (ದೊಡ್ಡ ಬಂಡೆ) ನನ್ನ ಸಭೆಯನ್ನು ಕಟ್ಟುವೆನು".**

**ಇಲ್ಲಿ ಎರಡು ಪದಗಳ ಅರ್ಥ ವ್ಯತ್ಯಾಸಗಳನ್ನು ನೋಡಿದಿರಾ?!**

ಈಗ ಯೇಸು ಹೇಳಿದ "ನನ್ನ ಸಭೆ" ಎಂಬ ಮಾತನ್ನು ಕುರಿತು ಅರ್ಥ ಮಾಡಿಕೊಳ್ಳೋಣ.

**ಯೇಸು " ನನ್ನ ಸಭೆಗಳು " ಎಂದು ಹೇಳಿದನೆ?**

## ಇಲ್ಲ! ಆತನು ಹಾಗೆ ಹೇಳಲಿಲ್ಲ!

**ಹಾಗಾದರೆ ಏಕೆ ಈ ದಿನಗಳಲ್ಲಿ ಅನೇಕ ಸಭೆಗಳಿವೆ ಮತ್ತು ಪ್ರತಿಯೊಂದು ಸಭೆಯು ಇತರ ಸಭೆಯೊಂದಿಗೆ ಹೊಂದಾಣಿಕೆಯುಲ್ಲಿಲ್ಲ ಏಕೆ?**

**ಏಕೆ ಈ ದಿನಗಳಲ್ಲಿ ಅನೇಕ ಪಂಗಡಗಳಿವೆ ಅಥವ ವಿಭಾಗಗಳಿವೆ ?**

ಇದಕ್ಕೆ ಉತ್ತರ ಆದಿ ಸಭೆಯಲ್ಲೇ ಇತ್ತೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

**1 ಕೊರಿಂಥ 3:3,4**

**“ಯಾಕೆಂದರೆ ಇನ್ನೂ ಶರೀರಾಧೀನಸ್ವಭಾವುಳ್ಳವರಾಗಿದ್ದೀರಿ. ನಿಮ್ಮೊಳಗೆ ಹೊಟ್ಟೇಕಿಚ್ಚು ಜಗಳಗಳು ಇರುವಲ್ಲಿ ನೀವು ಶರೀರಾಧೀನಸ್ವಭಾವವುಳ್ಳವರಾಗಿದ್ದು ಕೇವಲ ನರಪ್ರಾಣಿಗಳಂತೆ ನಡೆಯುತ್ತೀರಲ್ಲವೆ. ಒಬ್ಬನು - ನಾನು ಪೌಲನವನು ಎಂದು ಮತ್ತೊಬ್ಬನು - ನಾನು ಅಪೋಲ್ಲೋಸನವನು ಎಂದು ಹೇಳುತ್ತಿರುವಾಗ ನೀವು ಕೇವಲ ನರಪ್ರಾಣಿಗಳಾಗಿದ್ದೀರಲ್ಲವೇ”**

ಹೌದು! ಆರಂಭದಿಂದಲೇ ಯಜಮಾನನಾದ ಯೇಸು ಮತ್ತು ಆತನ ವಾಕ್ಯವನ್ನು ಹಿಂಬಾಲಿಸದೆ **ನಾಯಕರನ್ನು** ಹಿಂಬಾಲಿಸುತ್ತಿದ್ದರು!

ಸುಮಾರು **2000** ವರ್ಷಗಳ ನಂತರ ಸಭೆಯ ಇತಹಾಸದಲ್ಲಿ

- ರೋಮನ್ ಕಥೋಲಿಕ್ ಸಭೆ ಒಂದು ವಿಭಾಗವಾಗಿಯೂ
- ಮತ್ತು ಪ್ರಾಟಿಸ್ಟೆಂಟ್ ಸಭೆಗಳು ಸುಮಾರು 750 ವಿಭಾಗಗಳಾಗಿಯೂ ಇವೆ!

ಹೌದು! ಕೆಲವರು ನಾವು **ಕಥೋಲಿಕ್‌ನವರು** ಎನ್ನುತ್ತಾರೆ! … ಬೇರೆ ಕೆಲವರು **ಲೂಥರನ್‌ರವರು** ಎನ್ನುತ್ತಾರೆ… ಇನ್ನೂ ಕೆಲವರು ಸಿ. ಎಸ್. ಐ. ನವರು, ಕೆಲವರು **ಮೆಥೋಡಿಸ್ಟ್**, ಕೆಲವರು **ಬ್ಯಾಪ್ಟಿಸ್ಟ್**, ಮತ್ತೆ ಕೆಲವರು **ಪೆಂಟಕೋಸ್ಟ್** ಎನ್ನುತ್ತಾರೆ ಮತ್ತು ಹೀಗೆಯೇ ಮುಂದುವರೆಯುತ್ತದೆ.

**ಈ ದಿನಗಳಲ್ಲಿ ಒಬ್ಬ ಕ್ರೈಸ್ತನು(ಳು) ಇನ್ನೊಬ್ಬ ಕ್ರೈಸ್ತನ(ಳ)ನ್ನು ಭೇಟಿಯಾದಾಗ ಕೇಳುವ ಮೊದಲ ಪ್ರಶ್ನೆ ನೀನು "ಯಾವ ಸಭೆ" ಯಿಂದ ಬಂದಿರುವೆ?**

**ಅಪೋಸ್ತಲರು ಆದಿಸಭೆಯ ಕಾಲದಲ್ಲಿ ಈ ರೀತಿಯ ಪ್ರಶ್ನೆಗಳನ್ನು ಕೇಳುತ್ತಿದ್ದರೆ?**

**ಇಲ್ಲ!**

ಆಗ ಒಂದೇ ಒಂದು ಸಭೆ ಮಾತ್ರ ಇತ್ತು – ಅದು ಯೇಸು ಕ್ರಿಸ್ತನ ಸಭೆ –

" ನನ್ನ ಸಭೆ "

**ಹಾಗಾದರೆ ಇಂದು ಈ ಒಂದೇ ಸಭೆ – ಒಂದೇ ದೇಹಕ್ಕೆ ಏನಾಯಿತು?**

**ಅದು ಎಲ್ಲಿದೆ? ನೀವು ತಿಳಿದುಕೊಳ್ಳಲು ಇಷ್ಟಪಡುವಿರಾ?**

ಅದನ್ನು ಕೆಳಗಿನ ವಾಕ್ಯದಲ್ಲಿ ಓದಿ ತಿಳಿದುಕೊಳ್ಳಿರಿ.

**ಇಬ್ರಿಯರಿಗೆ 12:23**

" ಪರಲೋಕದಲ್ಲಿ ಹೆಸರು ಬರಸಿಕೊಂಡಿರುವ ಚೊಚ್ಚಲ ಮಕ್ಕಳ ಸಭೆಗೂ .... "

ಹೌದು! ಇದುವೇ "**ಯೇಸು ಕ್ರಿಸ್ತನ ಸಭೆ**"

"ಸತ್ತವರೊಳಗಿಂದ ಮೊದಲು ಎದ್ದು ಬಂದವನು" (ಕೊಲೊಸ್ಸೆ 1:18)

ಈ ಸಭೆಯು ಯೇಸು ಕ್ರಿಸ್ತನ "ದೇಹ" ಆತನು ಇದನ್ನು "ನನ್ನ ಸಭೆ" ಎಂದು ಕರೆಯುತ್ತಾನೆ.

**ಪರಲೋಕದಲ್ಲಿ ಆ ಸದಸ್ಯರ ಹೆಸರುಗಳು ಬರೆಯಲ್ಪಟ್ಟಿವೆ!!**

ಹೌದು! ನಮ್ಮ ಕರ್ತನಾದ ಯೇಸುವಿನ ಜೊತೆ ಈ ಸಭೆಯು ಇರುವುದನ್ನು ಕುರಿತು ಕೆಳಗೆ ಕೊಟ್ಟಿರುವ ಪ್ರವಾದನೆಯಲ್ಲಿ ಓದುತ್ತೇವೆ.

**ಪ್ರಕಟನೆ 17:14**

" ಅವರು ಯಜ್ಞದ ಕುರಿಯಾದಾತನ ಮೇಲೆ ಯುದ್ಧಮಾಡುವರು, ಆದರೆ ಆತನು ಕರ್ತರ ಕರ್ತನೂ ರಾಜಾಧಿರಾಜನೂ ಆಗಿರುವದರಿಂದ ಅವರನ್ನು ಜಯಿಸುವನು; ಮತ್ತು ದೇವರು ಕರೆದವರೂ ದೇವರಾದುಕೊಂಡವರೂ ನಂಬಿಗಸ್ತರೂ ಆಗಿರುವ ಆತನ ಕಡೆಯವರು ಆ ಜಯದಲ್ಲಿ ಪಾಲುಗಾರರಾಗುವರು."

ಹೌದು! ಭವಿಷ್ಯದ ಪ್ರವಾದನೆಯಲ್ಲಿ "**ಯಜ್ಞದ ಕುರಿಯಾದಾತನ**" **ಜೊತೆ ಯೇಸುಕ್ರಿಸ್ತನ ಸಭೆ**
ಮಹಿಮೆಯಲ್ಲಿರುವುದನ್ನು ಸೂಚಿಸುತ್ತದೆ!

**ಈಗ ಈ ಸಭೆಯನ್ನು ಹೇಗೆ ವಿವರಿಸಲಾಗಿದೆ?**

ನಾವು ಹೀಗೆ ಓದುತ್ತೇವೆ... ಅವರು... **ಕರೆದವರೂ,** ಮತ್ತು **ದೇವರಾದುಕೊಂಡವರೂ** ಮತ್ತು **ನಂಬಿಗಸ್ಥರೂ...**

**ಇದರ ಅರ್ಥವೇನು?**

ಇದು ಸಭೆ ಮತ್ತು ಕ್ರೈಸ್ತರ **ಮೂರು ಹಂತದ ಬೆಳವಣಿಗೆಯನ್ನು** ಮತ್ತು **ಯೇಸುವಿನ ರಾಜ್ಯದಲ್ಲಿ ಮಹಿಮೆ**
ಹೊಂದುವ ಸದಸ್ಯರನ್ನು ಸೂಚಿಸುತ್ತದೆ!

**ಹೌದು! ಇದೇ ನಿಜವಾದ ಸಭೆಯ ರಹಸ್ಯವು - ಯೇಸು ಕ್ರಿಸ್ತನ ಶರೀರ!**

ಈ **ಮೂರು** ಹಂತವನ್ನು ನಾವು ಚರ್ಚಿಸಲಿದ್ದೇವೆ –

ಈ ದಿನದ ಅಭ್ಯಾಸದ **ಅರ್ಧಭಾಗವನ್ನು** ನೋಡಲಿದ್ದೇವೆ ಮತ್ತು ಭಾಗ – 2 ರಲ್ಲಿ ಉಳಿದ
**ಅರ್ಧಭಾಗವನ್ನು** ಅಭ್ಯಾಸ ಮಾಡಲಿದ್ದೇವೆ.

**1.** "ಕರೆದವರು" ಎಂದರೆ ಏನು? ಎಂದು ಅಭ್ಯಾಸ ಮಾಡೋಣ
ಈಗ ಕೆಳಗಿನ ವಾಕ್ಯವನ್ನು ಓದೋಣ –

**ಮತ್ತಾಯ 22:14**

**" ಕರೆಯಲ್ಪಟ್ಟವರು ಬಹು ಜನ, ಆಯಲ್ಪಟ್ಟವರು ಸ್ವಲ್ಪ ಜನ "**

ಹೌದು! ಇಲ್ಲಿ ಮೊದಲ ಎರಡು ಹಂತಗಳನ್ನು ಮತ್ತು ಅವರ ಸಂಖ್ಯೆಯನ್ನು ನೋಡಲಿದ್ದೇವೆ!

1. **"ಕರೆಯಲ್ಪಟ್ಟವರ" ಹಂತದಲ್ಲಿ ಅನೇಕ ಜನರಿದ್ದಾರೆ.**
2. **"ಆಯಲ್ಪಟ್ಟವರ" ಹಂತದಲ್ಲಿ ಸ್ವಲ್ಪ ಜನ ಮಾತ್ರ ಇದ್ದಾರೆ**

**“ಕರೆಯಲ್ಪಟ್ಟವರು” ಎಂದರೇನು? ಮತ್ತು ಈ ಅನೇಕರು ಎಂದರೆ ಯಾರು?**

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ಓದೋಣ –

**ಯೋಹಾನ 15:19**

**“ ಆದರೆ ನೀವು ಲೋಕದ ಕಡೆಯವರಲ್ಲದೆ ಇರುವುದರಿಂದಲೂ ನಾನು ನಿಮ್ಮನ್ನು ಲೋಕದೊಳಗಿಂದ ಆರಿಸಿತೆಗೆದುಕೊಂಡಿರುವುದರಿಂದಲೂ ಲೋಕವು ನಿಮ್ಮ ಮೇಲೆ ದ್ವೇಷ ಮಾಡುತ್ತದೆ ”**

ಹೌದು! ಲೋಕದೊಳಗಿಂದ ಆರಿಸಿಕೊಳ್ಳವುದರ ಬಗ್ಗೆ ಯೇಸು ಮಾತನಾಡುತ್ತಾರೆ.



ಇವರು ಸುವಾರ್ತೆಯ ಸಂದೇಶವನ್ನು ನಂಬುವಂತಹ " “ಕರೆಯಲ್ಪಟ್ಟವರು”

- ಯೇಸುವನ್ನು ತಮ್ಮ ಸ್ವಂತ ರಕ್ಷಕನಾಗಿ ಅಂಗೀಕರಿಸಿಕೊಂಡು,
- ಯೇಸು ಲೋಕದ ಜನರ ಪಾಪಗಳಿಗಾಗಿ ಕಲ್ವಾರಿ ಶಿಲುಬೆಯಲ್ಲಿ ಸತ್ತನು ಎಂದು ನಂಬುತ್ತಾರೆ. ಮತ್ತು
- ಯೇಸುವಿನಲ್ಲಿ ವಿಶ್ವಾಸವಿಡುತ್ತಾರೆ.

ನಿಜಾಂಶವೇನೆಂದರೆ “ಚರ್ಚ್” (ಸಭೆ) ಎಂಬ ಆಂಗ್ಲ ಪದವು ಗ್ರೀಕ್ ಪದವಾದ

# EKKLESIA

**( ಎಕ್ಲೇಸಿಯಾ )**

ದಿಂದ ಬಂದಿದೆ ಇದಕ್ಕೆ "ಕರೆಯಲ್ಪಡುವುದು" ಅಥವಾ "ಆಯಲ್ಪಡುವುದು" ಎಂದು ಅರ್ಥ.



**ಆದ್ದರಿಂದ ಯೇಸುವಿನ ಮೇಲೆ ವಿಶ್ವಾಸವಿಡಲು ಮೊದಲ ಹೆಜ್ಜೆ ಇಡುವವರೆಲ್ಲರನ್ನೂ "ಕರೆಯಲ್ಪಟ್ಟವರು" ಎಂದು ಹೇಳಲಾಗುತ್ತದೆ. ಮತ್ತು ಅವರು ವಿಶ್ವಾಸಿಗಳಾಗಿರುತ್ತಾರೆ.**

**ಇವರಲ್ಲಿ "ಅನೇಕರು" ಇರುತ್ತಾರೆ ಎಂದು ನಾವು ಓದುತ್ತೇವೆ!!**

ಇವರು ಎಲ್ಲಾ ಸಭೆಗಳಲ್ಲಿ ಹಾಜರಿರುತ್ತಾರೆ!

ಇವರಿಗೆ ಯೇಸುವಿನ ಮೇಲೆ ವಿಶ್ವಾಸವಿರುತ್ತದೆ, ತಪ್ಪದೆ ಭಾನುವಾರದ ಆರಾಧನೆಗಳಿಗೆ, ವಿಶೇಷ ಪ್ರಾರ್ಥನಾ ಮತ್ತು ಉಪವಾಸ ಕೂಟಗಳಿಗೆ ಹಾಜರಾಗುತ್ತಾರೆ. ದಶಮ ಭಾಗವನ್ನು ಕೊಡುತ್ತಾರೆ ಮತ್ತು ಹೆಚ್ಚಾಗಿ ಪಾಪ ಮಾಡದಿರಲು ಮತ್ತು ತಮ್ಮ ಜೀವನದಲ್ಲಿ ನೀತಿವಂತರಾಗಿರಲು ಪ್ರಯತ್ನಿಸುತ್ತಾರೆ.

ಇವರನ್ನು ಹೆಸರಿಗೆ ಮಾತ್ರ ವಿಶ್ವಾಸಿಗಳು ಎಂದು ಕರೆಯಲಾಗುತ್ತದೆ!!

**ಇವರೇ ಕರೆಯಲ್ಪಟ್ಟ ವರ್ಗ!!**




## ಈಗ "ಅನೇಕರು" ಎಂಬುದರ ಅರ್ಥವೇನು?

## "ಅವಿಶ್ವಾಸಿ" (ವಿಶ್ವಾಸವಿಲ್ಲದವರು)ಗಳನ್ನು ಹೋಲಿಸಿ ನೋಡಿದಾಗ ಕರೆಯಲ್ಪಟ್ಟವರು ಅನೇಕರಿದ್ದಾರೆಯೇ?

**ಹಾಗಿರಲು ಸಾಧ್ಯವಿಲ್ಲ!!**

ಈ ದಿನ ಲೋಕದ 1/ 3 ಭಾಗ ಮಾತ್ರ ಕ್ರೈಸ್ತರಿದ್ದಾರೆ ಮತ್ತು ಭಾರತದಲ್ಲಿ ಕೇವಲ 2% ರಷ್ಟು !

**ಹಾಗಾದರೆ ಯಾವ ರೀತಿಯಲ್ಲಿ "ಕರೆಯಲ್ಪಟ್ಟ" ವರ್ಗವು ಅನೇಕವಾಗಿದೆ ?**




ಇಲ್ಲಿ "ಅನೇಕರು" ಎಂಬ ಪದವು "ಅವಿಶ್ವಾಸಿಗಳನ್ನು" ಹೋಲಿಸಿ ಹೇಳಿಲ್ಲ ಆದರೆ ಮುಂದಿನ ಹಂತ ಅಥವಾ ಕ್ರೈಸ್ತರ ವರ್ಗವಾದ "ಆಯಲ್ಪಟ್ಟವರನ್ನು" ಹೋಲಿಸಿ ಹೇಳಲಾಗಿದೆ!

**ಹೌದು! ಸ್ವಲ್ಪ ಜನರಾದ "ಆಯಲ್ಪಟ್ಟ"ವರನ್ನು ಹೋಲಿಸಿದಾಗ "ಕರೆಯಲ್ಪಟ್ಟವರು" ಅನೇಕರು!!**




ಭಾರತದಲ್ಲಿ ಸುವಾರ್ತಾ ಸೇವೆ ನೋಡುವುದಾದರೆ, ಮೊದಲ ಶತಮಾನದಲ್ಲಿ ತೋಮನ ಮೂಲಕ ಕೇರಳ ಮತ್ತು ತಮಿಳುನಾಡಿನಲ್ಲಿ ಆರಂಭವಾಯಿತು.

ಅಪೋಸ್ತಲನಾದ ತೋಮನ ಸುವಾರ್ತಾ ಸೇವೆಯ ಮೂಲಕ ಭಾರತದ ಎಷ್ಟು ಜನರು ಕ್ರೈಸ್ತರಾದರು ಎಂಬ ಫಲಿತಾಂಶದ ದಾಖಲೆ ಇಲ್ಲ. ಮತ್ತು 18ನೇ ಶತಮಾನದ ಆರಂಭದವರೆಗೆ ಭಾರತದಲ್ಲಿ
ಕ್ರೈಸ್ತತ್ವದ ಬಗ್ಗೆ ನಾವು ಹೆಚ್ಚಾಗಿ ವಿಷಯವನ್ನು ನೋಡುವುದಿಲ್ಲ.

“ಮಾರ್ಡನ್ ಮಿಷನ್”ನ ತಂದೆ ಎಂದು ಕರೆಯಲ್ಪಡುವ ವಿಲಿಯಮ್ ಕ್ಯಾರಿ **(1761-1834)** ರವರು ಸುವಾರ್ತಾ ಸೇವೆ ಮಾಡಲು ಅತ್ಯಧಿಕ ಆಸಕ್ತಿಯಿಂದ ಭಾರತಕ್ಕೆ ಬಂದರು ಮತ್ತು ಪ್ರಾಟೆಸ್ಟೆಂಟ್(ಬ್ಯಾಪ್ಟಿಸ್ಟ್) ಆದ ಇವರು ಸತ್ಯವೇದವನ್ನು ಭಾರತದ **26** ಭಾಷೆಗಳಲ್ಲಿ ಭಾಷಾಂತರ ಮಾಡಿದರು!!

ಹೌದು! ಭಾರತದಲ್ಲಿನ ವಿವಿಧ ಭಾಷೆಯ ತೊಂದರೆಗಳನ್ನು ಮನದಟ್ಟ ಮಾಡಿಕೊಂಡು ಸತ್ಯವೇದವನ್ನು ಎಷ್ಟು ಭಾಷೆಗಳಲ್ಲಿ ಸಾಧ್ಯವೋ ಅಷ್ಟು ಭಾಷೆಗಳಲ್ಲಿ ಭಾಷಾಂತರ ಮಾಡಿದರು. ಆದ್ದರಿಂದ ಭಾರತೀಯರು ಸತ್ಯವೇದವನ್ನು ಮತ್ತು ಸುವಾರ್ತೆಯನ್ನು ಅವರ ಸ್ವಂತ ಭಾಷೆಯಲ್ಲಿ ಓದಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಯಿತು.



ಈ ಕಾಲಾವಧಿಯಿಂದಲೇ
ಕ್ರೈಸ್ತತ್ವ ಮತ್ತು ಸಭೆಗಳು ಭಾರತದಲ್ಲಿ ಬೆಳೆಯಲು ಆರಂಭವಾಯಿತು.

“ಕರೆಯಲ್ಪಟ್ಟವರ” ವರ್ಗಕ್ಕೆ ನಾವು ಹಿಂದಿರುಗುವುದಾದರೆ ಇವರು ಕ್ರೈಸ್ತ ಜೀವಿತದಲ್ಲಿ ಮೊದಲ ಹೆಜ್ಜೆ ಇಡುತ್ತಾರೆ (ಕ್ರಿಸ್ತನಂತಹ ಜೀವಿತ) – ವಿಶ್ವಾಸದ ಹೆಜ್ಜೆ.

ಆದರೆ, ಇವರನ್ನು “ಕ್ರಿಸ್ತನಲ್ಲಿ ಮಕ್ಕಳು” ಎಂದು ಕರೆಯಲಾಗುತ್ತದೆ ಮತ್ತು ಸಾಧಾರಣ ಮಕ್ಕಳಂತೆ ಇವರಿಗೂ ಹಾಲಿನ ಅವಶ್ಯಕತೆ ಇದೆ!



ಆ “ಹಾಲನ್ನು” ಕುರಿತು ಕೆಳಗಿನ ವಾಕ್ಯದಲ್ಲಿ ಹೀಗೆ ಓದುತ್ತೇವೆ.

**1ಪೇತ್ರ 2:2**

**“ ....ಹಸುಮಕ್ಕಳಂತೆ ಪಾರಮಾರ್ಥಿಕವಾದ ಶುದ್ಧ ಹಾಲನ್ನು ಬಯಸಿರಿ”**



ಹೌದು! **ಆತ್ಮೀಕ** “ಮಕ್ಕಳು” ಪ್ರಾಮಾಣಿಕವಾಗಿ ಪಾರಮಾರ್ಥಿಕವಾದ ಶುದ್ಧ ಹಾಲು ಎಂಬ ದೇವರ ವಾಕ್ಯವನ್ನು ಹುಡುಕಬೇಕು.

ಹೌದು! ಇದು ಅವರಿಗೆ ಸತ್ಯವೇದದ ಮೊದಲ ಪರಿಚಯವು.

ಅವರು ಸತ್ಯವೇದವನ್ನು ಮೊದಲ ಬಾರಿ ಓದಲು ಆರಂಭಿಸುತ್ತಾರೆ ಮತ್ತು

→ ಅವರಿಗೆ
**“ ಪಾರಮಾರ್ಥಿಕವಾದ ಶುದ್ಧ ಹಾಲನ್ನು ಬಯಸಿರಿ ”**
ಎಂದು ಹೇಳಲಾಗಿದೆ.

**"ಹಾಲು ಎಂಬ ಪದದ" ಅರ್ಥವೇನು**? ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ನೋಡುತ್ತೇವೆ.


ಇಬ್ರಿಯರಿಗೆ 5:12 / 6:1-3

"ಕಾಲವನ್ನು ನೋಡಿದರೆ ನೀವು ಇಷ್ಟರೊಳಗೆ ಬೋಧಕರಾಗಿರಬೇಕಾಗಿದ್ದರೂ ಒಬ್ಬನು ನಿಮಗೆ ದೈವೋಕ್ತಿಗಳ ಮೂಲ ಪಾಠಗಳನ್ನು ತಿರಿಗಿ ಕಲಿಸಿಕೊಡಬೇಕಾಗಿದೆ; ನೀವು ಹಾಲು ಕುಡಿಯತಕ್ಕವರೇ ಹೊರತು ಗಟ್ಟಿಯಾದ ಆಹಾರವನ್ನು ತಿನ್ನತಕ್ಕವರಲ್ಲ"

" ಆದದರಿಂದ ನಿರ್ಜೀವಕರ್ಮಗಳ ಮೇಲಣ ನಂಬಿಕೆಯನ್ನು ಬಿಟ್ಟು ಬಿಟ್ಟು ದೇವರಲ್ಲಿಯೇ ನಂಬಿಕೆಯಿಡಬೇಕಾದದ್ದು, ಸ್ನಾನ ಹಸ್ತಾರ್ಪಣಗಳ ವಿಷಯವಾದ ಉಪದೇಶ, ಸತ್ತವರಿಗೆ ಪುನರುತ್ಥಾನವೂ ನಿತ್ಯವಾದ ನ್ಯಾಯತೀರ್ಪು ಉಂಟೆಂಬದು ಇವುಗಳನ್ನು ಪದೇಪದೇ ಅಸ್ತಿವಾರವಾಗಿ ಹಾಕದೆ ಕ್ರಿಸ್ತನ ವಿಷಯವಾದ ಪ್ರಥಮ ಬೋಧನೆಯನ್ನು ಕುರಿತು ಇನ್ನೂ ಮಾತಾಡದೆ ಪೂರ್ಣವಾದ ತಿಳುವಳಿಕೆಗೆ ಸಾಗುತ್ತಾ ಹೋಗೋಣ. ಮತ್ತು ದೇವರ ಚಿತ್ತವಾದರೆ ಹೀಗೆ ಸಾಗುತ್ತಾ ಹೋಗುವೆವು."

ಹೌದು! ಅವು ದೇವರ "**ದಿವ್ಯವಾಣಿ**"ಯ ಮೊದಲ ನಿಯಮ ಅಥವಾ ಪ್ರಥಮ ಬೋಧನೆಯಾಗಿವೆ.

ಆದ್ದರಿಂದ "**ವಿಶ್ವಾಸಿಗಳನ್ನು**" **ಸತ್ಯವೇದ ಅಭ್ಯಾಸ** ಮಾಡಲು ಪ್ರೋತ್ಸಾಹಿಸಲಾಗುತ್ತದೆ.




ಯೇಸು ಮತ್ತು ಅತನ ಜೀವನ ಮತ್ತು ಬೋಧನೆ ಮತ್ತು ಕಲ್ವಾರಿ ಶಿಲುಬೆಯ ಮರಣವನ್ನು ಕುರಿತು ದಾಖಲಾಗಿರುವ ನಾಲ್ಕು ಸುವಾರ್ತೆಯ ಪುಸ್ತಕಗಳನ್ನು ವಿಶ್ವಾಸಿಯು ಓದಿದ ನಂತರ

ಕ್ರಮೇಣವಾಗಿ ಸತ್ಯವೇದದ ಉಳಿದ ಭಾಗಗಳನ್ನು ಓದುತ್ತಾನೆ(ಳೆ)

**ಪೌಲನು, ಪೇತ್ರ, ಯೋಹಾನ ಮತ್ತು ಇತರ ಪತ್ರಿಕೆಗಳು.**

ಮತ್ತು ಹೀಗೆ ಮಾಡುವುದರಿಂದ ಸತ್ಯವೇದವು ಅವನಿ(ಳಿ)ಗೆ ಕನ್ನಡಿಯ ಹಾಗೆ ತನ್ನ ವೈಯಕ್ತಿಕ ಜೀವನದಲ್ಲಿನ ಯೋಚನೆ, ಮಾತುಗಳು ಮತ್ತು ಕ್ರಿಯೆಗಳಲ್ಲಿರುವ ಪಾಪದ ಸ್ಥಿತಿಯನ್ನು ಚಿತ್ರದ ಹಾಗೆ ತೋರಿಸುತ್ತದೆ!!

ಆದ್ದರಿಂದ ಆತನ/ಆಕೆಯ ಹೃದಯದಲ್ಲಿ ಶುದ್ಧವಾಗುವ ಕಾರ್ಯ ವಿಧಾನವು ನಡೆಯುತ್ತದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

**ಎಫೆಸ 5:26**

**"ಆತನು ಅದನ್ನು ಪ್ರತಿಷ್ಠೆಪಡಿಸುವದಕ್ಕಾಗಿ ತನ್ನನ್ನು ಒಪ್ಪಿಸಿಕೊಟ್ಟನು. ಅದನ್ನು ಕಳಂಕ ಸುಕ್ಕು ಮುಂತಾದ್ದೊಂದೂ ಇಲ್ಲದ ಕನ್ನಿಕೆಯೋ ಎಂಬಂತೆ ಪರಿಶುದ್ಧವೂ ನಿರ್ದೋಷವೂ ಮಹಿಮೆಯುಳ್ಳದ್ದೂ ಆಗಿರುವ ಸಭೆಯನ್ನಾಗಿ ತನ್ನೆದುರಿನಲ್ಲಿ ನಿಲ್ಲಿಸಿಕೊಳ್ಳಬೇಕೆಂದು ವಾಕ್ಯೋಪದೇಶ ಸಹಿತವಾದ ಜಲಸ್ನಾನವನ್ನು ಮಾಡಿಸಿ ಶುದ್ಧಮಾಡಿದನು"**

ಹೌದು! "ವಿಶ್ವಾಸಿಗಳು" ಅಥವಾ "ಕರೆಯಲ್ಪಟ್ಟ" ವರ್ಗದವರು ನೈತಿಕವಾಗಿ ಒಳ್ಳೆಯ ಜೀವನವನ್ನು ನಡೆಸಲು ಪ್ರಯತ್ನಿಸುತ್ತಾರೆ.

ಇದಲ್ಲದೆ ಕರ್ತನಾದ ಯೇಸುವಿನ ಮೇಲೆ ಇಡುವ ನಂಬಿಕೆಯಿಂದ ಅವರಿಗೆ "ನೀತಿ" ಯುಂಟಾಗುತ್ತದೆ.

"ನೀತಿ" ಎಂದರೇನು? ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ರೋಮಾಪುರದವರಿಗೆ 5 : 1**

**"ಹೀಗಿರಲಾಗಿ ನಾವು ನಂಬಿಕೆಯಿಂದ ನೀತಿವಂತರಾದ ಕಾರಣ ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ದೇವರೊಂದಿಗೆ ಉಂಟಾದ ಸಮಾಧಾನದಲ್ಲಿ ಇರೋಣ"**

ಹೌದು! ಈ ನೀತಿ ಎಂಬುದು ಯೇಸುವಿನ ಅಮೂಲ್ಯವಾದ ರಕ್ತದ ಮೇಲೆ ನಂಬಿಕೆಯಿಡುವುದರಿಂದ ನಮ್ಮ ಪಾಪಗಳಿಗೆ ಸಿಗುವ ಕ್ಷಮಾಪಣೆಯಾಗಿದೆ

**ಇದು ದೇವರ ವರ!**



**ಆದರೆ ಕ್ರಮೇಣವಾಗಿ ಕ್ರೈಸ್ತ ಜೀವಿತದಲ್ಲಿ ಪ್ರಗತಿಯಾಗುತ್ತಿರುವಂತೆ ದೇವರ ವಾಕ್ಯದ ಜ್ಞಾನವು ಅಧಿಕವಾಗುತ್ತದೆ ಮತ್ತು ಅದರ ಅರ್ಥವು ತಿಳಿಯುತ್ತದೆ.**

**ಯಾಕೋಬ 2:17**

**“ ಹಾಗೆಯೇ ಕ್ರಿಯೆಗಳಿಲ್ಲದಿದ್ದರೆ ನಂಬಿಕೆಯು ತನ್ನಲ್ಲಿ ಜೀವವಿಲ್ಲದ್ದು”**

**ಇದರ ಅರ್ಥವೇನು?**

ಹೌದು! ನಂಬಿಕೆಯು ಕ್ರಿಯೆಗಳ ಜೊತೆ ಪ್ರಗತಿ ಹೊಂದಬೇಕು

ಈ “ಕ್ರಿಯೆಗಳು” ಯಾವುದು ಎಂದು ನೀವು ಕೇಳಬಹುದು.

ಅವು ದಾನ ಮತ್ತು ಸಮಾಜ ಸೇವೆಗಳಾದ ಬಡವರಿಗೆ ಅನ್ನದಾನ ಮಾಡುವುದು, ಇತರ ಸಹಾಯ ಮಾಡುವುದು, ಶಾಲೆಗಳನ್ನು ತೆರೆಯುವುದು, ಅನಾಥಾಶ್ರಮ ತೆರೆಯವುದೇ ಆ ಕ್ರಿಯೆಗಳೇನು??

**ಇವೆಲ್ಲಾ ಒಳ್ಳೆಯ ಕ್ರಿಯೆಗಳೇ ಆದರೆ ದೇವರು ಒಬ್ಬ ಕ್ರೈಸ್ತನಲ್ಲಿ ಎದುರು ನೋಡುವ ವಿಶಿಷ್ಟವಾದ "ಕ್ರಿಯೆಗಳು” ಇವುಗಳಲ್ಲ. ಹಾಗಾದರೆ ದೇವರು ಎದುರು ನೋಡುವ ಕ್ರಿಯೆಗಳು ಯಾವುವು?**

ಈ ಪ್ರಶ್ನೆಯನ್ನು ಯೇಸುವಿನ ಬಳಿ ಕೆಳಗಿನ ವಾಕ್ಯದಲ್ಲಿ ಕೇಳೋಣ

**ಯೋಹಾನ 6:28**

**“ಅವರು ದೇವರಿಗೆ ಮೆಚ್ಚಿಕೆಯಾದ ಕೆಲಸಗಳನ್ನು ನಾವು ನಡಿಸಬೇಕಾದರೆ ಏನು ಮಾಡಬೇಕೆಂದು ”**



**ನೋಡಿದಿರಾ! ಇದೇ ಪ್ರಶ್ನೆಯನ್ನು ಯೇಸುವಿನ ಬಳಿ ಕೇಳಲಾಗಿತ್ತು!!**

**ನಾವೆಲ್ಲರೂ ಈ ಪ್ರಶ್ನೆಗೆ ಯೇಸುವಿನ ಉತ್ತರವನ್ನು ಕೇಳಲು ಇಷ್ಟಪಡುವುದಿಲ್ಲವೇ?**

ಯೇಸುವಿನ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ಗಮನಿಸೋಣ –

**ಯೋಹಾನ 6:29**

"ದೇವರು ಮೆಚ್ಚುವ ಕೆಲಸ ಯಾವುದೆಂದರೆ ಆತನು ಕಳುಹಿಸಿಕೊಟ್ಟವನನ್ನು ನೀವು ನಂಬುವದೇ ಅಂದನು"

ಹೌದು! ದೇವರು ಎದುರು ನೋಡುವ ಕ್ರಿಯೆಗಳು ಯಾವುದೆಂದರೆ

"ಅತನು ಕಳುಹಿಸಿಕೊಟ್ಟವನನ್ನು ನೀವು ನಂಬುವುದೇ"

ಆದರೆ ಯಾರಾದರೂ ಹೀಗೆ ಕೇಳಬಹುದು –

**ನಾವು ಮೊದಲೇ ಆತನನ್ನು ನಂಬಿದ್ದೇವೆ (ನಂಬುತ್ತೇವೆ)**

ಹೌದು ಅದು ನಿಜ, ಆದರೆ ಇದು **"ಯೇಸುವಿನ ಮೇಲೆ"** ಒಬ್ಬ ವಿಶ್ವಾಸಿಯ **ಆರಂಭದ ನಂಬಿಕೆಗಿಂತ ಆಳವಾದ ನಂಬಿಕೆಯನ್ನು** ಸೂಚಿಸುತ್ತದೆ.

ಹೌದು! ಈ **"ನಂಬುವುದು"** ಎಂಬುದನ್ನು ಉತ್ತಮವಾಗಿ **"ವಿಶ್ವಾಸವಿಡುವುದು"** ಎಂದು ಭಾಷಾಂತರಿಸಬಹುದು

ಮತ್ತು ಈ ನಂಬಿಕೆಯು ಯಜಮಾನನ ಮಾತುಗಳ ಮತ್ತು **ಆಜ್ಞೆಗಳ ಮೇಲೆ ವಿಶ್ವಾಸ** ಮತ್ತು **ವಿಧೇಯತೆ** ತರುತ್ತದೆ ಎಂಬುದನ್ನು ಸೂಚಿಸುತ್ತದೆ.

ಏಕೆಂದರೆ ಕೆಳಗಿನ ವಾಕ್ಯದಲ್ಲಿ ನಾವು ಸ್ಪಷ್ಟವಾಗಿ ಹೀಗೆ ಓದುತ್ತೇವೆ –

**ಯೋಹಾನ 8:31**

"ನೀವು ನನ್ನ ವಾಕ್ಯದಲ್ಲಿ ನೆಲೆಗೊಂಡವರಾದರೆ ನಿಜವಾಗಿ ನನ್ನ ಶಿಷ್ಯರಾಗಿದ್ದು ಸತ್ಯವನ್ನು ತಿಳಿದುಕೊಳ್ಳುವಿರಿ"

ಆದ್ದರಿಂದ ವಿಶ್ವಾಸಿಗಳು ತಮ್ಮ ಕ್ರೈಸ್ತ ಜೀವಿತದಲ್ಲಿ ಪ್ರಗತಿ ಹೊಂದಿ(ಮುಂದುವರೆದು) "ಶಿಷ್ಯರಾಗಬೇಕೆಂದು" ಕೆಳಗಿನ ವಾಕ್ಯದಲ್ಲಿ ನೋಡುತ್ತೇವೆ –



**ಫಿಲಿಪ್ಪಿಯವರಿಗೆ 1:29**

**“ ಹೇಗೆಂದರೆ ಕ್ರಿಸ್ತನ ಮೇಲೆ ನಂಬಿಕೆಯಿಡುವದೂ ಆತನಿಗೋಸ್ಕರ ಬಾಧೆಯನ್ನನುಭವಿಸುವದೂ ನಿಮಗೆ ಅನುಗ್ರಹವಾಗಿ ದೊರೆಯಿತು”**

....ಮತ್ತು ಇನ್ನೂ ಸ್ಪಷ್ಟವಾಗಿ ಕೆಳಗಿನ ವಾಕ್ಯದಲ್ಲಿ ನೋಡುತ್ತೇವೆ –.



**1 ಪೇತ್ರ 2:21**

**“ ಇದಕ್ಕಾಗಿಯೇ ನೀವು ಕರೆಯಲ್ಪಟ್ಟಿರಿ; ಕ್ರಿಸ್ತನು ಸಹ ನಿಮಗೋಸ್ಕರ ಬಾಧೆಯನ್ನನುಭವಿಸಿ ನೀವು ತನ್ನ ಹೆಜ್ಜೆಯ ಜಾಡಿನಲ್ಲಿ ನಡೆಯಬೇಕೆಂದು ಮಾದರಿಯನ್ನು ತೋರಿಸಿ ಹೋದನು”**

**ಇದು ಸ್ಪಷ್ಟವಾಗಿದೆಯಲ್ಲವೇ!**
ಹೌದು! ಕರೆಯಲ್ಪಟ್ಟ ಹಂತದ ನಂಬಿಕೆ ಮತ್ತು "ವಿಶ್ವಾಸದಿಂದ” **ಬೆಳೆದು** ಪ್ರಗತಿಹೊಂದಿ **ಯೇಸುವಿನ ಹೆಜ್ಜೆಯ ಜಾಡನ್ನು** ಹಿಂಬಾಲಿಸುವ ಹಂತಕ್ಕೆ ಬರಬೇಕು!

ಎಲ್ಲಾ “ವಿಶ್ವಾಸಿ”ಗಳಿಂದ ದೇವರು ಇದನ್ನು ಎದುರು ನೋಡುತ್ತಾನೆ.

ಈ ಕ್ರಿಯೆಗಳನ್ನು ನಂಬಿಕೆಯ ಜೊತೆ ಸೇರಿಸಬೇಕಾಗಿದೆ!

**ಆದರೆ ನಾವು ಏನು ನೋಡುತ್ತೇವೆ?**

**ಸ್ವಲ್ಪ ಜನರು ಮಾತ್ರ ಇದನ್ನು ನೋಡುತ್ತಾರೆ.**
**ಯೇಸುವಿನ ಹೆಜ್ಜೆಯ ಜಾಡನ್ನು ಹಿಂಬಾಲಿಸುವ ಈ ಸುವರ್ಣಾವಕಾಶ!**

ಆದ್ದರಿಂದ ಕ್ರೈಸ್ತ “ವಿಶ್ವಾಸಿಗಳ” ಬಹು ಭಾಗ ಜನರು ಈ ಮೊದಲನೆಯ “ಕರೆಯಲ್ಪಟ್ಟ” ಹಂತದವರೆಗೂ ಮಾತ್ರ ಬರುತ್ತಾರೆ. ಅವರು ಆರಿಸಲ್ಪಟ್ಟ ಎರಡನೆಯ ಹಂತವನ್ನು

ನೋಡುವುದೂ ಇಲ್ಲ ಮತ್ತು "ವಿಶ್ವಾಸಿಗಳಾಗಿಯೇ" ಸಾಯುತ್ತಾರೆ!

ಆದರೆ ಈ ದಿನ ಕ್ರೈಸ್ತ ಜೀವಿತದ ಎರಡನೆಯ ಹಂತವಾದ "ಆರಿಸಲ್ಪಟ್ಟ"ವರನ್ನು ಕುರಿತು ನೋಡಿ ಅಭ್ಯಾಸ ಮಾಡೋಣ.

## ನೀವು ಮುಂದೆ ಅಭ್ಯಾಸ ಮಾಡಲು ಇಷ್ಟಪಡುವಿರಾ?

**ಹೌದಾ?? ಮುಂದೆ ಸಾಗೋಣ!**

**2.** "...ಆಯಲ್ಪಟ್ಟವರು ಸ್ವಲ್ಪ ಜನ ಅಂದನು" – **ಮತ್ತಾಯ 22:14**

ಹೌದು! **"ಆಯಲ್ಪಟ್ಟವರಲ್ಲಿ"** **ಕೆಲವು ಕ್ರೈಸ್ತರನ್ನು ಮಾತ್ರ** ಕಾಣಬಹುದು!

ಈ "ಸ್ವಲ್ಪ" ಜನರು ಯಜಮಾನನ (ಯೇಸುವಿನ) ಮಾತುಗಳನ್ನು ಮತ್ತು ಆಜ್ಞೆಗಳನ್ನು ಕೇಳಿ ಅದಕ್ಕೆ ವಿಧೇಯರಾಗುತ್ತಾರೆ –

**ತನ್ನ ಶಿಷ್ಯರಿಗೆ ಕೊಟ್ಟ ಯಜಮಾನನ ಆಜ್ಞೆ ಏನೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.**

### ಮತ್ತಾಯ 16:24

**" ಯಾವನಿಗಾದರೂ ನನ್ನ ಹಿಂದೆ ಬರುವದಕ್ಕೆ ಮನಸ್ಸಿದ್ದರೆ ಅವನು ತನ್ನನ್ನು ನಿರಾಕರಿಸಿ ತನ್ನ ಶಿಲುಬೆಯನ್ನು ಹೊತ್ತುಕೊಂಡು ನನ್ನ ಹಿಂದೆ ಬರಲಿ "**

ಹೌದು! ಯೇಸುವನ್ನು ಹಿಂಬಾಲಿಸುವುದು ಮತ್ತು ಶಿಷ್ಯರಾಗುವುದು "ಸ್ವಯಿಚ್ಛೆಯಿಂದ" (ತಮಿಳಿನಲ್ಲಿ – ವಿರುಂಬಿನಾಲ್) ಅಥವಾ ಅದು ಒಬ್ಬರ ವೈಯಕ್ತಿಕ ಆಯ್ಕೆಯಾಗಿದೆ!

ಯಾವ ಒತ್ತಾಯವಾಗಲಿ ಕಡ್ಡಾಯವಾಗಲಿ ಇರುವುದಿಲ್ಲ!

**ಯೇಸುವನ್ನು ಹಿಂಬಾಲಿಸಲು ತೀರ್ಮಾನ ಮಾಡಿದ ನಂತರ ಆತನು ಅಥವಾ ಆಕೆಯು ಏನು ಮಾಡಬೇಕು?**

## "........ಅವನು(ಳು) ತನ್ನನ್ನು ನಿರಾಕರಿಸಿ"

### ಈ ವಾಕ್ಯದ ಅರ್ಥವೇನು?

ಇದನ್ನೇ ಯೇಸು ಮೊದಲು ಮಾಡಿದನು!



ಇದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಇಬ್ರಿಯ 10:7**

**" ಆಗ ನಾನು - ಇಗೋ ದೇವರೇ ನಿನ್ನ ಚಿತ್ತವನ್ನು ನೆರವೇರಿಸುವುದಕ್ಕೆ ಬಂದಿದ್ದೇನೆ.... "**

ಹೌದು! ಯೇಸು ತನ್ನ ಚಿತ್ತವನ್ನು ನಿರಾಕರಿಸಿ ತಂದೆಯ ಚಿತ್ತವನ್ನು ತೆಗೆದುಕೊಂಡನು.

ಮತ್ತು ಈಗ ತನ್ನ ಶಿಷ್ಯರೂ ಸಹ ಹಾಗೆಯೇ ಮಾಡಬೇಕೆಂದು ಕರೆಯುತ್ತಾನೆ!

**ರೋಮಾಪುರದವರಿಗೆ 12 : 2**

**" ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನ ಮನಸ್ಸನ್ನು ಹೊಂದಿಕೊಂಡು ಪರಲೋಕ ಭಾವದವರಾಗಿರಿ. ಹೀಗಾದರೆ ದೇವರ ಚಿತ್ತಕ್ಕನುಸಾರವಾದದ್ದು ಅಂದರೆ ಉತ್ತಮವಾದದ್ದೂ ಮೆಚ್ಚಿಕೆಯಾದದ್ದೂ ದೋಷವಿಲ್ಲದ್ದೂ ಯಾವ ಯಾವದೆಂದು ವಿವೇಚಿಸಿ ತಿಳುಕೊಳ್ಳುವಿರಿ"**

ಆದ್ದರಿಂದ ಸ್ವಂತ ಚಿತ್ತ – "ಈ ಲೋಕದ ಆತ್ಮ" ವನ್ನು ನಿಧಾನವಾಗಿ ನಿರಾಕರಿಸುತ್ತಾ
ದೇವರ ಚಿತ್ತವನ್ನು ವಿವೇಚಿಸಿ ಅದನ್ನೇ ಮಾಡಬೇಕು.

**ಹೌದು! ಒಬ್ಬನು(ಳು) ಲೌಕಿಕ ಜೀವನದ "ಸ್ವಯಂ" (ವೈಯಕ್ತಿಕ) ಕನಸುಗಳು, ಲಕ್ಷ್ಯಗಳು ಮತ್ತು ಮಹತ್ವಾಕಾಂಕ್ಷೆಗಳು ಇವುಗಳನ್ನು ನಿಧಾನವಾಗಿ ನಿರಾಕರಿಸುತ್ತಿರುವಾಗ ದೇವರ ವಾಕ್ಯವಾದ ಸತ್ಯವೇದದಿಂದ ದೇವರ ಚಿತ್ತ ಅಥವಾ ದೈವೀಕ ಚಿತ್ತದ ತಿಳುವಳಿಕೆಯು ತೆರೆಯಲ್ಪಡುತ್ತದೆ!**




ಈ ವಿಧಾನವಾದ "ಸ್ವಯಂ" ನಿರಾಕರಣೆಯು ಕೆಲವು ಲೌಕಿಕ ಚಟುವಟಿಕೆಗಳನ್ನು ದೂರವಿರಿಸಿ ದೇವಜನರ ಕೂಟಗಳಿಗೆ ಹಾಜರಾಗುವುದರೊಂದಿಗೆ ಪ್ರಾರಂಭವಾಗುತ್ತದೆ ಮತ್ತು ಸಮಯವನ್ನು ದೇವರ ಕೆಲಸಕ್ಕೋಸ್ಕರ ಮೀಸಲಿಡುವುದು ಅಥವ ಕುಟುಂಬದವರ ಮತ್ತು ಸ್ನೇಹಿತರ ದಯೆಯನ್ನು ತ್ಯಾಗ ಮಾಡುವಂತೆ ಮಾಡುತ್ತದೆ.

**ದೇವರ ಚಿತ್ತವನ್ನು ಮಾಡಲು ಇಡುವ ಪ್ರತಿಯೊಂದು ಹೆಜ್ಜೆಯಿಂದ ದೈವೀಕ ಚಿತ್ತದ ತಿಳುವಳಿಕೆಯು ಸ್ಪಷ್ಟವಾಗುತ್ತಾ ಬರುತ್ತದೆ.**

ಇದು ಯೇಸುವಿನ "**ಹಿಂಬಾಲಕರಾಗಲು**" ದೇವರ ಚಿತ್ತಕ್ಕೆ **ಒಪ್ಪಿಸಿಕೊಡುವುದಕ್ಕೆ** ಆಸ್ಪದವಾಗುತ್ತದೆ.

**ಇದನ್ನು ಪ್ರತಿಷ್ಠೆ ಅಥವಾ ಸಮರ್ಪಣೆ ಎಂದು ಕರೆಯಲಾಗುತ್ತದೆ.**

### ಇದರ ನಂತರ
### “ತನ್ನ ಶಿಲುಬೆಯನ್ನು ಹೊತ್ತುಕೊಂಡು ನನ್ನ ಹಿಂದೆ ಬರಲಿ”

**ಇದಕ್ಕೆ ಅರ್ಥವೇನು?**

ಇದು ಯೇಸುವಿನ ಮಾದರಿಯಲ್ಲಿ ಹಿಂಬಾಲಿಸುವ ತ್ಯಾಗದ ಜೀವನವನ್ನು ಸೂಚಿಸುತ್ತದೆ.

ಏಕೆಂದರೆ ಯೇಸುವಿನ ಶಿಲುಬೆಯು ಈ ಲೋಕದ ರಕ್ಷಕನಾಗಲು ನಮ್ಮ ಕರ್ತನಾದ ಯೇಸು ಮಾಡಿದ ಮಹಾ ತ್ಯಾಗವನ್ನು ಸೂಚಿಸುತ್ತದೆ.

**ಇಲ್ಲಿ ಯಾವ ತ್ಯಾಗವನ್ನು ಕುರಿತು ಹೇಳಲಾಗಿದೆ?**

**ಹಾಗಾದರೆ ಎಲ್ಲಾ ಕ್ರೈಸ್ತರು ನಿಜವಾದ ಶಿಲಬೆಗಳನ್ನು ಹೊತ್ತುಕೊಳ್ಳಬೇಕೆ?**

ಕೆಲವರು ಹಾಗೆ ಅಂದುಕೊಳ್ಳುತ್ತಾರೆ!

ಇದರಿಂದಲೇ ಬಿಷಪ್‌ಗಳು, ಧರ್ಮಾಧ್ಯಕ್ಷರು, ಆರ್ಚ್‌ಬಿಷಪ್‌ಗಳು ಇತರರು **ತಮ್ಮ ಕೊರಳಿಗೆ ಸರದಲ್ಲಿ ಭಾರವಾದ ಲೋಹದ ಶಿಲುಬೆಯನ್ನು ಹಾಕಿಕೊಳ್ಳುತ್ತಾರೆ!**





ಇನ್ನೂ ಕೆಲವರು ಶುಭ ಶುಕ್ರವಾರದಂದು (Good Friday) ತಮ್ಮನ್ನು ತಾವೇ ಶಿಲುಬೆಗೆ ಹಾಕಿಸಿಕೊಳ್ಳುತ್ತಾರೆ, ಕೆಲವು ಗಂಟೆಗಳ ನಂತರ ಶಿಲುಬೆಯಿಂದ ಕೆಳಗೆ ಇಳಿಯುತ್ತಾರೆ! ಈ ರೀತಿ ಫಿಲಿಫೈನ್ಸ್ ದೇಶದಲ್ಲಿ ಅತ್ಯಧಿಕವಾಗಿ ನಡೆಯುತ್ತದೆ!

➡ ಇನ್ನೂ ಕೆಲವರು ತಾವು ಹೋಗುವ ಸ್ಥಳದಲ್ಲೆಲ್ಲಾ ಮರದ ಶಿಲುಬೆಯನ್ನು ತಮ್ಮ ಜೊತೆ ಹೊತ್ತುಕೊಂಡು ಹೋಗುತ್ತಾರೆ.

ಕೆಲವು ವರ್ಷಗಳ ಹಿಂದೆ ಒಬ್ಬ ವ್ಯಕ್ತಿ ಇಸ್ರಾಯೇಲ್ ಭೂಮಿಯಲ್ಲಿ ಈ ರೀತಿಯಾಗಿ ಮಾಡಿದನು.

## "ಶಿಲುಬೆ" ತ್ಯಾಗದ ಅರ್ಥ ಇದೇನಾ?

ಅಪ್ರೊಸ್ತಲನಾದ ಪೌಲನ ಉತ್ತರವನ್ನು ಕೇಳೋಣ –

ಅಪ್ರೋಸ್ತಲನಾದ ಪೌಲನು ಕೆಳಗಿನ ವಾಕ್ಯದಲ್ಲಿ ಈ ರೀತಿ ವಿವರಿಸುತ್ತಾನೆ –

**ರೋಮಾಪುರದವರಿಗೆ 12:1**

**"ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಗೆಯಾಗಿಯೂ ಇರುವ ಸಜೀವಯಜ್ಞವಾಗಿ ಅರ್ಪಿಸಿರಿ.."**

ಈ "ಸಜೀವ ಯಜ್ಞ" ಎಂಬುದು ಯಜಮಾನನಾದ ಯೇಸುವಿನ ಸೇವೆಯಲ್ಲಿ "ನಿಮ್ಮ ದೇಹಗಳನ್ನು" ಅಥವಾ ಮಾನವ ಜೀವನ ಮತ್ತು ಅದರ ಹಕ್ಕುಗಳು ಮತ್ತು ಭಾಗ್ಯಗಳನ್ನು ಯಜ್ಞವಾಗಿ ಅರ್ಪಿಸುವುದನ್ನು ಸೂಚಿಸುತ್ತದೆ.

**ಈ ತ್ಯಾಗಗಳು ಯಾವುದೆಂದರೆ –**

## ಸಮಯ



(ಕರ್ತನ ಸೇವೆಯಲ್ಲಿ ಅನೇಕ ಗಂಟೆಗಳನ್ನು ಸಮರ್ಪಿಸುವುದು)

# ದೇಹಾರೋಗ್ಯ



(ಬಲ, ಶಕ್ತಿಯನ್ನು ದೇವರ
ಸೇವೆಯ ಚಟುವಟಿಕೆಯಲ್ಲಿ
ಮತ್ತು ವಿವಿಧ ಸ್ಥಳಗಳಿಗೆ
ಹೋಗುವುದರಲ್ಲಿ
ಮುಡಿಪಾಗಿಡುವುದು)



# ಸಂಪತ್ತು

(ಐಶ್ವರ್ಯ - ಹಣ, ಮನೆ,
ವಾಹನ, ಇತರೆಗಳನ್ನು
ದೇವರ ಸೇವೆಯಲ್ಲಿ
ಉಪಯೋಗಿಸುವುದು)

# ಪ್ರಭಾವ / ಪ್ರಾಬಲ್ಯ

(ದೇವರ "ಸುಗ್ಗಿ" **(Harvest)**
ಕೆಲಸಕ್ಕೆ ಬಹಿರಂಗವಾಗಿ
ಮಾತನಾಡುವ
**(Public Speaker)**
ಸಾಮರ್ಥ್ಯವನ್ನು
ಉಪಯೋಗಿಸುವುದು)





# ಪ್ರತಿಭೆಗಳು

(ದೇವರ ಸೇವೆಯಲ್ಲಿ ಬೋಧಿಸುವುದು, ಚಿತ್ರರಚನೆ, ಆಲೋಚನೆ ಹೇಳುವುದು ಭಾಷಾಂತರ ಮಾಡುವುದು ಇತರೆ)

ಈಗ ನಾವು ನೆನಪಿನಲ್ಲಿಡಬೇಕಾದದ್ದೇನೆಂದರೆ ಒಬ್ಬನು(ಳು) ತನ್ನಲ್ಲಿರುವುದನ್ನು ಮಾತ್ರ ತ್ಯಾಗ ಮಾಡಲು ಸಾಧ್ಯ ಆದ್ದರಿಂದ ನಾವು ಹೀಗೆ ಓದುತ್ತೇವೆ.

**ಲೂಕ 12:48**

**" ಯಾವನಿಗೆ ಬಹಳವಾಗಿ ಕೊಟ್ಟದೆಯೋ ಅವನ ಕಡೆಯಿಂದ ಬಹಳವಾಗಿ ನಿರೀಕ್ಷಿಸಲ್ಪಡುವುದು;ಇದಲ್ಲದೆ ಯಾವನ ವಶಕ್ಕೆ ಬಹಳವಾಗಿ ಒಪ್ಪಿಸಿದೆಯೋ ಅವನ ಕಡೆಯಿಂದ ಇನ್ನೂ ಹೆಚ್ಚಾಗಿ ಕೇಳುವರು "**

**ಒಬ್ಬನು(ಳು) ತನ್ನಲ್ಲಿ ಏನಿದೆ ಎಂದು ವಿವೇಚಿಸಿ ಅದೆಲ್ಲವನ್ನು ಯಜ್ಞದ ಬಲಿಪೀಠದ ಮೇಲೆ ಇಡಬೇಕು!**

ಈ ತ್ಯಾಗದ ಕ್ರೈಸ್ತ ಜೀವನವು – ಒಡಂಬಡಿಕೆಯಿಂದ ಆರಂಭವಾಗುತ್ತದೆ!

ಇದನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –


**ಕೀರ್ತನೆ 25:14**

**“ ....ಅವರಿಗೇ ತನ್ನ ಒಡಂಬಡಿಕೆಯ ಅನುಭವವನ್ನು ದಯಪಾಲಿಸುವನು”**

ಹೌದು! ಈ ಒಡಂಬಡಿಕೆಯು ಒಂದು ರಹಸ್ಯ ಒಡಂಬಡಿಕೆಯಾಗಿದೆ.

ಈಗ ನಾವು ಲೋಕದಲ್ಲಿ ಮಾಡುವ “ಒಡಂಬಡಿಕೆ” ಅಥವಾ ಒಪ್ಪಂದಗಳ ಅನೇಕ ಉದಾಹರಣೆಗಳನ್ನು ನೋಡುತ್ತೇವೆ.

ಸರ್ವ ಸಾಮಾನ್ಯವಾದದ್ದೇನೆಂದರೆ ಗಂಡು ಹೆಣ್ಣಿನ ನಡುವೆ ಮಾಡುವ ಮದುವೆ ಒಪ್ಪಂದ ಅಥವಾ ಒಡಂಬಡಿಕೆ.



ಈ ಮದುವೆ ಒಡಂಬಡಿಕೆಯನ್ನು ಸ್ಥಾಪಿಸಿ, ಸುಂದರವಾದ ಸಮಾರಂಭವನ್ನು ಏರ್ಪಡಿಸಿ ಕುಟುಂಬದವರನ್ನು ಮತ್ತು ಸ್ನೇಹಿತರನ್ನು ಸಾಕ್ಷಿಗಳನ್ನಾಗಿ ಕರೆಯಲಾಗುತ್ತದೆ.

ಈ ಒಡಂಬಡಿಕೆಯಲ್ಲಿ ಸಾಂಕೇತಿಕವಾಗಿ ಉಂಗುರಗಳನ್ನು ಬದಲಾಯಿಸುವುದು, ಕೊರಳಿಗೆ ಹೂಮಾಲೆಯನ್ನು ಹಾಕುವುದು, ದಕ್ಷಿಣ ಭಾರತದಲ್ಲಿ ಮದುವೆಗೆ “ತಾಳಿಯನ್ನು” ಕಟ್ಟುವುದು ಇತರೆ.



**ಮತ್ತು ಮದುವೆಯ ಒಡಂಬಡಿಕೆಯಂತೆ ಈ "ರಹಸ್ಯ ಒಡಂಬಡಿಕೆ"ಗೂ ಒಂದು ಸುಂದರವಾದ ಸಂಕೇತವಿದೆ. ನೀರಿನಲ್ಲಿ ಮುಳುಗುವುದು ಅಥವಾ "ದೀಕ್ಷಾಸ್ನಾನ" ಎಂದೂ ಕರೆಯಲಾಗುತ್ತದೆ!!**

ಯೊರ್ದನ್ ನದಿಯಲ್ಲಿ ಸ್ನಾನಿಕನಾದ ಯೋಹಾನನ ಮೂಲಕ ಯೇಸು ದೀಕ್ಷಾಸ್ನಾನ ಮಾಡಿಸಿಕೊಂಡಂತೆ, ದೀಕ್ಷಾಸ್ನಾನ ಮಾಡಿಸಿಕೊಳ್ಳುವ ಒಬ್ಬ ವ್ಯಕ್ತಿ ದೇವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುತ್ತಾನೆ(ಳೆ).

**ಮತ್ತು ಅದು ಎಂತಹ ಸುಂದರವಾದ ಸಂಕೇತವಾಗಿದೆ.**

ದೀಕ್ಷಾಸ್ನಾನದ ಸಂಕೇತವು ಒಬ್ಬ ವ್ಯಕ್ತಿ ದೀಕ್ಷಾಸ್ನಾನ ಮಾಡಿಸಿಕೊಳ್ಳಲು ಮುಂದೆ ಬಂದು ಸೊಂಟದಷ್ಟು ನೀರಿನ ಆಳದಲ್ಲಿ ನಿಂತುಕೊಳ್ಳುವುದರಿಂದ ಆರಂಭವಾಗುತ್ತದೆ!



ಇದು ಏನನ್ನೋ ಸೂಚಿಸುತ್ತದೆ!

ಹೌದು! ನೀರು ಸಾಂಕೇತಿಕವಾಗಿದೆಯೆಂದು ಕೆಳಗಿನ ವಾಕ್ಯದಲ್ಲಿ ನಾವು ಓದುತ್ತೇವೆ –

**ಪ್ರಕಟನೆ 17:15**

**" ......ಆ ಜಾರಸ್ತ್ರೀಯು ವಾಸಿಸಿರುವ ನೀರುಗಳನ್ನು ಕಂಡಿಯಲ್ಲ?**

ಅವು ಪ್ರಜೆ ಸಮೂಹ ಜನ ಭಾಷೆಗಳನ್ನು ಸೂಚಿಸುತ್ತವೆ"

**ಹೌದು! ಇಲ್ಲಿ "ನೀರು" ಲೋಕಕ್ಕೆ ಸಾಂಕೇತಿಕವಾಗಿದೆ !!**

ಮತ್ತು ಅರ್ಧ ದೇಹ ನೀರಿನೊಳಗೆ ಮತ್ತು ಉಳಿದ ಅರ್ಧ ದೇಹ ನೀರಿನ ಮೇಲೆ ಇರುವಂತೆ ನಿಂತುಕೊಳ್ಳುವುದು ಇನ್ನೊಂದು ವಿಷಯವನ್ನು ಸೂಚಿಸುತ್ತದೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –



**ಯೋಹಾನ 15:19**

**" ನೀವು ಲೋಕದ ಕಡೆಯವರಾಗಿರುತ್ತಿದ್ದರೆ ಲೋಕವು ನಿಮ್ಮ ಮೇಲೆ ತನ್ನವರೆಂದು ಮಮತೆ ಇಡುತ್ತಿತ್ತು; ಆದರೆ ನೀವು ಲೋಕದ ಕಡೆಯವರಲ್ಲದೆ ಇರುವದರಿಂದಲೂ ನಾನು ನಿಮ್ಮನ್ನು ಲೋಕದೊಳಗಿಂದ ಆರಿಸಿ ತೆಗೆದುಕೊಂಡಿರುವುದರಿಂದಲೂ ಲೋಕವು ನಿಮ್ಮ ಮೇಲೆ ದ್ವೇಷಮಾಡುತ್ತದೆ. "**

ಹೌದು! ನೀರಿನಲ್ಲಿ ನಿಂತಿರುವ ಸ್ಥಿತಿಯು ಈ ಲೋಕದಲ್ಲಿ ಕ್ರೈಸ್ತನ(ಳ) ಸ್ಥಿತಿಯನ್ನು

**ಸಮಗ್ರವಾಗಿ (ಪರಿಪೂರ್ಣವಾಗಿ)** ಸೂಚಿಸುತ್ತದೆ.

ಈ ಲೋಕದಲ್ಲಿದ್ದೇವೆ (ನೀರು)–ಆದರೂ ಈ ಲೋಕದವರಲ್ಲ (ಇಲ್ಲಿ"ಲೋಕದ ಆತ್ಮವನ್ನು ಸೂಚಿಸುತ್ತದೆ").

ಮುಂದಿನ ವಿಷಯವೇನೆಂದರೆ ನೀರಿನಲ್ಲಿ ನಿಂತುಕೊಂಡು ಕೈ ಜೋಡಿಸಿರುವ ಸ್ಥಿತಿ

ಇದು ತನ್ನನ್ನೇ ಯಜ್ಞವಾಗಿ ಅರ್ಪಿಸುವ ಅಥವಾ ತನ್ನನ್ನೇ ತಾನೇ ಒಪ್ಪಿಸಿ ಕೊಡುವ ಸ್ಥಿತಿಯನ್ನು ಸೂಚಿಸುತ್ತದೆ!


ಈ ದೀಕ್ಷಾಸ್ನಾನಕ್ಕಾಗಿ ಮುಂದೆ ಬರುವವನು(ಳು) ತನಗೆ ತಾನೇ ದೀಕ್ಷಾಸ್ನಾನ ಮಾಡಿಕೊಳ್ಳಲು ಸಾಧ್ಯವಿಲ್ಲ ಆದರೆ ಅವನಿ(ಳಿ)ಗೆ ಬೇರೆ ಯಾರಾದರೂ ದೀಕ್ಷಾಸ್ನಾನ ಮಾಡಿಸಬೇಕಾಗಿದೆ.

ಆದ್ದರಿಂದ ಯಾರಾದರೂ ದೀಕ್ಷಾಸ್ನಾನ ಮಾಡಿಸುವುದಕ್ಕೆ ಮುಂದೆ ಬರಬೇಕೆಂದು ನೋಡುತ್ತೇವೆ!

**(ಕೆಲವು ಸಮಯದಲ್ಲಿ ಹೆಂಗಸರು ಮತ್ತು ದಪ್ಪಗಿರುವ ವ್ಯಕ್ತಿಗಳಿಗಾಗಿ 2 ಅಥವಾ 3 ಜನ ಬೇಕಾಗುತ್ತದೆ)**

### ಇದು ಏನನ್ನು ಸೂಚಿಸುತ್ತದೆ?

ದೀಕ್ಷಾಸ್ನಾನ ಮಾಡಿಸುವವನು(ರು) ನಮ್ಮ ಕರ್ತನು ಮತ್ತು ಯಜಮಾನನಾದ ಯೇಸುಕ್ರಿಸ್ತನನ್ನು ಸೂಚಿಸುತ್ತಾರೆ. "ಶಿರಸ್ಸಿನ" ಚಿತ್ತವನ್ನು ಮಾಡಲು ಯೇಸು ಕ್ರಿಸ್ತನ "ಕೈಗಳಲ್ಲಿ" ನಮ್ಮನ್ನು ನಾವು ಒಪ್ಪಿಸಿ ಕೊಡುತ್ತೇವೆ ಎಂಬುದನ್ನು ಸೂಚಿಸುತ್ತದೆ.




ನಂತರ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನನ್ನು ನೀರಿನಲ್ಲಿ ಬೆನ್ನು ಹಿಂದೆ ಮಾಡಿ ಮುಳುಗಿಸಲಾಗುತ್ತದೆ. ಇದು ಮಾನವ ಹಿತಾಸಕ್ತಿಗಳು ಮತ್ತು ಜೀವನ ಹಕ್ಕುಗಳನ್ನು ಕ್ರಿಸ್ತೀಯ ಜೀವಿತದಲ್ಲಿ ಸ್ವಇಚ್ಛೆಯಿಂದ ದೀಕ್ಷಾಸ್ನಾನದ ನಂತರ ಮರಣ ಪರ್ಯಂತ ತ್ಯಾಗ ಮಾಡುವುದನ್ನು ಸೂಚಿಸುತ್ತದೆ.



ಇದನ್ನು ಕುರಿತು ಅಪೋಸ್ತಲನಾದ ಪೌಲನು ಕೆಳಗಿನ ವಾಕ್ಯದಲ್ಲಿ ಹೇಳುವುದನ್ನು ಓದುತ್ತೇವೆ.

**ಕೊಲೊಸ್ಸೆ 3:3 -"ಯಾಕಂದರೆ ನೀವು ಸತ್ತಿರಲ್ಲಾ, ನಿಮ್ಮ ಜೀವವು ಕ್ರಿಸ್ತನೊಂದಿಗೆ ದೇವರಲ್ಲಿ ಮರೆಯಾಗಿಟ್ಟಿದೆ "**



**ಕೊನೆಯದಾಗಿ ಆ ವ್ಯಕ್ತಿಯನ್ನು ನೀರಿನೊಳಗಿಂದ ಎಬ್ಬಿಸುವುದರೊಂದಿಗೆ ದೀಕ್ಷಾಸ್ನಾನದ ವಿಧಾನವು ಮುಕ್ತಾಯವಾಗುತ್ತದೆ.**

**ಇದು ಏನನ್ನು ಸೂಚಿಸುತ್ತದೆ?**

ಇದು ಯಜ್ಞದ ಮೂಲಕ "ಒಡಂಬಡಿಕೆ" ಮಾಡಿರುವುದನ್ನು ನೆರವೇರಿಸುವುದರಲ್ಲಿ ನಂಬಿಗಸ್ಥನಾಗಿರುವವನಿಗೆ(ಳಿಗೆ) ಕ್ರಿಸ್ತನ ವಾಗ್ದಾನಗಳನ್ನು ಸೂಚಿಸುತ್ತದೆ.

ಇದರ ಬಗ್ಗೆ ಯೇಸು ಹೇಳಿರುವ ಮಾತುಗಳನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ. –

**ಯೋಹಾನ 6:44 –"...ಮತ್ತು ನಾನು ಅವನನ್ನು ಕಡೇ ದಿನದಲ್ಲಿ ಎಬ್ಬಿಸುವೆನು"**

ಹೌದು! ನಂಬಿಗಸ್ಥರಾಗಿರುವವರೆಲ್ಲರಿಗೂ ಆತ್ಮೀಕ ಪರಲೋಕ ಜೀವನಕ್ಕೆ ಪುನರುತ್ಥಾನದ ವಾಗ್ದಾನವಾಗಿದೆ.

**ಇದೇ ಯೇಸುಕ್ರಿಸ್ತನ ಸಭೆಯ "ಒಂದೇ ದೀಕ್ಷಾಸ್ನಾನ" – ಎಫೆಸ 4:5**

ತಮಿಳಿನಲ್ಲಿ ಇದನ್ನು **"ಜ್ಞಾನಸ್ನಾನಂ"** ಎನ್ನುತ್ತಾರೆ ಅಂದರೆ ಜ್ಞಾನವನ್ನು ಪಡೆದ **ನಂತರ** (ದೀಕ್ಷೆ) ಸ್ನಾನ ಮಾಡುವುದು!



ಆದ್ದರಿಂದ ಈ ಎರಡನೆಯ ಹೆಜ್ಜೆ ಅಥವಾ ಹಂತವನ್ನು ಪ್ರವೇಶಿಸಲು ಆರಿಸಲ್ಪಟ್ಟವರೆಲ್ಲರೂ ಯೇಸು ಕ್ರಿಸ್ತನ ಹೆಜ್ಜೆ ಜಾಡನ್ನು ಹಿಂಬಾಲಿಸುವುದಾಗಿ ದೇವರೊಂದಿಗೆ ಒಡಂಬಡಿಕೆಯನ್ನು ಮಾಡಿರುತ್ತಾರೆ. ಈ ಒಡಂಬಡಿಕೆಯನ್ನು ಸ್ವತಃ ಯೇಸು ಯೋರ್ದನ್ ನದಿಯಲ್ಲಿ ಮಾಡಿದಂತೆ ನೀರಿನಲ್ಲಿ ಮುಳುಗುವ ದೀಕ್ಷಾಸ್ನಾನದ ಮೂಲಕ ಸಾಂಕೇತಿಸುತ್ತಾರೆ.

ಇದಾದ ನಂತರ ದೇವರು ಅವರನ್ನು ಒಂದು ಹೆಸರು ಹಿಡಿದು ಕರೆಯುವುದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಕೀರ್ತನೆ 50:5**

**"ನನ್ನೊಡನೆ ಯಜ್ಞದ ಮೂಲಕ ಒಡಂಬಡಿಕೆಯನ್ನು ಮಾಡಿಕೊಂಡ ನನ್ನ ಭಕ್ತರನ್ನು ನನ್ನ ಬಳಿಗೆ ಕರಕೊಂಡು ಬನ್ನಿರಿ ಎಂದು ಆಜ್ಞಾಪಿಸುತ್ತಾನೆ"**

ಹೌದು! ಈ ವರ್ಗದ ಕ್ರೈಸ್ತರನ್ನು ಅಪೋಸ್ತಲನಾದ ಪೌಲನು ತನ್ನ ಎಲ್ಲಾ ಪತ್ರಿಕೆಗಳಲ್ಲಿ ಸೂಚಿಸಿದ್ದಾನೆ.

**(1 ಕೊರಿಂಥ 1:2, ಫಿಲಿಪ್ಪಿಯವರಿಗೆ 1:1, ಕೊಲೊಸ್ಸೆಯವರಿಗೆ 1:2 ನ್ನು ಓದಿರಿ)**

ಆದ್ದರಿಂದ ಯೇಸುವನ್ನು ಹಿಂಬಾಲಿಸಲು ಯಜ್ಞದ ಮೂಲಕ ಒಡಂಬಡಿಕೆ ಮಾಡಿಕೊಂಡಿರುವ "ಆಯಲ್ಪಟ್ಟವರೆಲ್ಲರನ್ನು" – ದೇವಜನರು ಎಂದು ಕರೆಯಲಾಗಿದೆ!

ಮತ್ತು ಈ "ದೇವಜನರನ್ನು" ಕುರಿತು ನಾವು ಹೀಗೆ ಸಹ ಓದುತ್ತೇವೆ–

**2 ಕೊರಿಂಥದವರಿಗೆ 5:17**

**"ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು"**

ಹೌದು! ಇಲ್ಲಿ "ಕ್ರಿಸ್ತನಲ್ಲಿದ್ದರೆ" ಎಂಬುದು "ಯಜ್ಞದ ಮೂಲಕ ಒಡಂಬಡಿಕೆ" ಮಾಡಿರುವುದನ್ನು ಸೂಚಿಸುತ್ತದೆ ಮತ್ತು ಅವರು ಪರಿಶುದ್ಧ ಆತ್ಮನಿಂದ ಗರ್ಭಧಾರಣೆಯ ಯಾಗಿರುವುದರಿಂದ "ನೂತನ ಸೃಷ್ಟಿಯಾಗಿರುವರು" ಮತ್ತು "ಹೊಸ ಮನಸ್ಸನ್ನು" ಪಡೆದಿರುವರು.

ಅವರ (**ಕನಸುಗಳು, ಗುರಿ ಮತ್ತು ಮಹತ್ವಾಕಾಂಕ್ಷೆಗಳು**) ಎಲ್ಲವೂ ನೂತನವಾಗುವುದು.

ಆತ್ಮೀಕ ಹಾಗೂ ಮೇಲಿರುವಂಥವುಗಳ ಮೇಲೆ ಮನಸ್ಸುಳ್ಳವರಾಗಿರುತ್ತಾರೆ.

ಹೌದು! ಈ ಕ್ರೈಸ್ತ "ಹಿಂಬಾಲಕರಿಗೆ ಹೊಸ ಮನಸ್ಸು" ಮತ್ತು "ಹಳೆಯ ಮನಸ್ಸು" ಎರಡೂ ಇರುತ್ತದೆ.

ಒಂದು **ಆತ್ಮೀಕ** ಮತ್ತು ಇನ್ನೊಂದು **ಲೌಕಿಕ.**

ಇವೆರಡು ಶರೀರವನ್ನು ಹತೋಟಿಯಲ್ಲಿಡಲು ಪ್ರಯತ್ನಿಸುತ್ತವೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಕೊಲೊಸ್ಸೆ 3:9-10**

**"ಒಬ್ಬರಿಗೊಬ್ಬರು ಸುಳ್ಳಾಡಬೇಡಿರಿ; ನೀವು ಪೂರ್ವಸ್ವಭಾವವನ್ನು ಅದರ ಕೃತ್ಯಗಳ ಕೂಡ ತೆಗೆದಿಟ್ಟು ನೂತನ ಸ್ವಭಾವವನ್ನು ಧರಿಸಿಕೊಂಡಿದ್ದೀರಲ್ಲವೇ. ಈ ಸ್ವಭಾವವು ಅದನ್ನು ಸೃಷ್ಟಿಸಿದಾತನ ಹೋಲಿಕೆಯ ಮೇರೆಗೆ ದಿನೇದಿನೇ ನೂತನವಾಗುತ್ತಾ ಪೂರ್ಣ ಜ್ಞಾನವನ್ನು ಉಂಟುಮಾಡುತ್ತದೆ"**

**ಹೌದು!**

ಇಲ್ಲಿ ಸ್ಪಷ್ಟವಾಗಿ ಕೊಟ್ಟಿದೆ!

"ನೂತನ ಸ್ವಭಾವ" (**ಆತ್ಮೀಕ ಮನಸ್ಸು**) ಬೆಳೆಯುತ್ತಾ ಇರಬೇಕು ಮತ್ತು "ಪೂರ್ವ ಸ್ವಭಾವ" (**ಯಜ್ಞವಾಗಿ ಅರ್ಪಿಸಿದ ಲೌಕಿಕ ಮನಸ್ಸು**) **ತೆಗೆದುಹಾಕಲ್ಪಡಬೇಕು**

ಇದರಿಂದ ಒಬ್ಬ ಕ್ರೈಸ್ತನಿಗೆ ತನ್ನಲ್ಲಿಯೇ **ಹೋರಾಟ ಉಂಟಾಗುತ್ತದೆ!**

ಆದ್ದರಿಂದ "**ಆರಿಸಲ್ಪಟ್ಟ**" ಹಂತವನ್ನು ಪ್ರವೇಶಿಸಿದವರನ್ನು


**"ದೇವಜನರು"** ಮತ್ತು **"ನೂತನ ಸೃಷ್ಟಿ"**

ಎಂದು ಕರೆಯಲಾಗುತ್ತದೆ!



**ಹೌದು ಅವರು ಸಾಧಾರಣವಾದ "ಕರೆಯಲ್ಪಟ್ಟವರು" ಅಥವಾ ವಿಶ್ವಾಸಿಗಳಿಗಿಂತ ಜ್ಞಾನ ತಿಳುವಳಿಕೆ ಮತ್ತು ಜೀವನದ ಹಾದಿಯಲ್ಲಿ ಬಹಳ ವ್ಯತ್ಯಾಸವುಳ್ಳವರಾಗಿರುತ್ತಾರೆ.**

ಈಗ ಸುವಾರ್ತಾ ಯುಗದ ಸಭೆಯ ಭಾಗಗಳನ್ನು ಕೆಳಗಿನ ನಕ್ಷೆಯಲ್ಲಿ ನೋಡೋಣ –




ಈ ಶಿರಸ್ಸಿಲ್ಲದಿರುವ ಪಿರಮಿಡ್ ಸುವಾರ್ತಾ ಯುಗದಲ್ಲಿನ ಅಪರಿಪೂರ್ಣ ಮತ್ತು ಶರೀರದಲ್ಲಿರುವ ಈಗಿನ ಸಭೆಯ ಸ್ಥಿತಿಯನ್ನು ಸೂಚಿಸುತ್ತದೆ.

ಕರ್ತನಾದ **ಯೇಸು ಕ್ರಿಸ್ತನು** ಸಭೆಗೆ ಕಣ್ಣಿಗೆ ಕಾಣದಿರುವ "**ಶಿರಸ್ಸಾಗಿ**" ಪರಲೋಕದಲ್ಲಿರುವನು – **ಎಫೆಸ** 1:22 – **"..ಇದಲ್ಲದೆ ಆತನನ್ನು ಎಲ್ಲಾದರ ಮೇಲೆ ಇರಿಸಿ ಸಭೆಗೆ ಶಿರಸ್ಸಾಗಿ ನೇಮಿಸಿದನು"**

## ಈಗ ಸಭೆಯಲ್ಲಿ ನಾಲ್ಕು ಭಾಗಗಳಿವೆ ಎಂದು ನೋಡಿದೆವು
## n, m, p, q,

### ಇವು ಏನನ್ನು ಸೂಚಿಸುತ್ತವೆ?

ಈಗ ಇವುಗಳನ್ನು ಒಂದೊಂದಾಗಿ ನೋಡೋಣ



ಇದು **'N'** ಸಮತಳದ ಕೆಳಗಿದೆ. **N** ಸಮತಲವು ಅಂದರೆ ಪರಿಪೂರ್ಣ ಮಾನವನ ಸ್ಥಿತಿ ಅಥವ "ನೀತಿವಂತರೆಂಬ ನಿರ್ಣಯ ಹೊಂದಿದ" ಸ್ಥಿತಿ (ಪಾಪಗಳ ಕ್ಷಮೆಯಿಂದಾಗಿ ಪರಿಪೂರ್ಣರೆಂದು ಎಣಿಸಲ್ಪಟ್ಟವರು)

ನೀತಿವಂತರೆಂಬ ನಿರ್ಣಯವು ಅಥವಾ ಪಾಪಕ್ಷಮಾಪಣೆಯು ಯೇಸುವನ್ನು ನಂಬುವುದರ ಮೂಲಕ ಸಿಗುತ್ತದೆ –

**ರೋಮಾಪುರದವರಿಗೆ 5:1** –"**ಹೀಗಿರಲಾಗಿ ನಾವು ನಂಬಿಕೆಯಿಂದ ನೀತಿವಂತರಾದ ಕಾರಣ ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ದೇವರೊಂದಿಗೆ ಉಂಟಾದ ಸಮಾಧಾನದಲ್ಲಿ ಇರೋಣ**"

ಆದರೆ ನಾವು ನೋಡುವುದೇನೆಂದರೆ ಈ ವರ್ಗದವರಿಗೆ ಯೇಸುವಿನ ಮೇಲಾಗಲಿ ಆತನು ಮಾಡಿದ ಈಡುಬಲಿಯಲ್ಲಾಗಲಿ ವಿಶ್ವಾಸ ಇರುವುದಿಲ್ಲ. ಇವರು ಹೆಸರಿಗೆ ಕ್ರೈಸ್ತರೆಂದು ಹೇಳಿಕೊಂಡರೂ ವಿಶ್ವಾಸ ಇರುವುದಿಲ್ಲ.

ಇವರು ದೇವರ ವಾಕ್ಯದ ಮತ್ತು ಯೇಸುವಿನ ಮೇಲಿನ ವಿಶ್ವಾಸಕ್ಕಿಂತ ವಿಜ್ಞಾನ ಶಾಸ್ತ್ರಗಳ ಮೇಲೆ ಅಧಿಕ ವಿಶ್ವಾಸವಿಡುತ್ತಾರೆ.

**ಇವರು "ಕಪಟಿಗಳು" (ವೇಷಧಾರಿಗಳು) ಮತ್ತು ಅವಿಶ್ವಾಸಿಗಳು.**

ಡಾರ್ವಿನ್ ವಿಕಾಸವಾದ ಸಿದ್ಧಾಂತ ಮತ್ತು "ದೇವರು ಇಲ್ಲ" ಎಂಬ ಸಿದ್ಧಾಂತಗಳ ಮೂಲಕ ಅಸತ್ಯ ಹರಡುತ್ತಿರುವುದರಿಂದ ಇವರ ಸಂಖ್ಯೆಯೂ ಹೆಚ್ಚಾಗುತ್ತಿದೆ!!

ಇದಲ್ಲದೆ ಈ ದಿನಗಳಲ್ಲಿ ದೇವರ ವಾಕ್ಯಗಳನ್ನು ಹೇಳುವ ಬೋಧಕ ವರ್ಗದವರು ಸಹ ಹೆಚ್ಚಾಗಿದ್ದಾರೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

## 2 ಕೊರಿಂಥದವರಿಗೆ 2:17

**"ದೇವರ ವಾಕ್ಯವನ್ನು (ಸ್ವಂತ ಲಾಭಕ್ಕಾಗಿ) ಕಲಬೆರಿಕೆ ಮಾಡುವವರಾದ ಹೆಚ್ಚು ಪಾಲಿನ ಜನರ ಹಾಗಿರದೆ ... (ಎನ್.ಐ.ವಿ)"**

ಹೌದು! ಕ್ರೈಸ್ತ ಸಂಸ್ಥೆಗಳಾದ ಶಾಲೆಗಳು, ಆಸ್ಪತ್ರೆಗಳು ಇವುಗಳಲ್ಲಿ ಸೇರಿದವರಾಗಿದ್ದಾರೆ. ಇದನ್ನು ನಡೆಸುವವರ ಉದ್ದೇಶ ಮತ್ತು ಆಸಕ್ತಿಗಳೆಲ್ಲವೂ ಆತ್ಮೀಕವಾಗಿರದೆ ಲೌಕಿಕದ್ದಾಗಿರುತ್ತದೆ.
ಮತ್ತು ಅನೇಕರ ಆಸಕ್ತಿಯು ದೇವರ ವಾಕ್ಯದ ಮೇಲಿರುವುದಿಲ್ಲ.

ಇದಲ್ಲದೆ ಅನೇಕ ಬೋಧಕರು ಮತ್ತು "ದೇವಸೇವಕರು" ದೇವರ ಮೇಲಿನ ಪ್ರೀತಿಗಾಗಿ ಅಥವಾ ಸತ್ಯಕ್ಕಾಗಿ ಬೋಧಿಸದೆ ಹಣ, ಹೆಸರು, ಘನತೆ ಇತ್ಯಾದಿಗಳಿಗಾಗಿ ಬೋಧಿಸುತ್ತಾರೆ ಮತ್ತು ಅವರು ವೈಯಕ್ತಿಕವಾಗಿ ಯೇಸುವಿನ ಮರಣ ಮತ್ತು ಆತನು ಲೋಕದ ರಕ್ಷಕನು ಎಂಬುದರ ಬಗ್ಗೆ ಆಳವಾದ ತಮ್ಮ ಸ್ವಂತ ಸಂದೇಹಗಳನ್ನು ವ್ಯಕ್ತಪಡಿಸುತ್ತಾರೆ.



ಈಗ ನಾವು ಎರಡನೆಯ ವರ್ಗವನ್ನು ಕುರಿತು ನೋಡೋಣ –

ಈ **'p'** ವರ್ಗವು **'N'** ಸಮತಳದ ಮೇಲಿದೆ ಅಥವಾ ನೀತಿವಂತರೆಂಬ ನಿರ್ಣಯ ಹೊಂದಿರುವವರ ಸಮತಲದಲ್ಲಿ ಇದೆ. ಏಕೆಂದರೆ ಇವರು ಯೇಸು ಮತ್ತು ಕಲ್ವಾರಿ ಶಿಲುಬೆಯಲ್ಲಿನ ಆತನ ಮರಣದ ಮೇಲೆ ವಿಶ್ವಾಸ ಹೊಂದಿದವರಾಗಿದ್ದಾರೆ.
ಇವರು "ಕರೆಯಲ್ಪಟ್ಟ" ವರ್ಗದ ಕ್ರೈಸ್ತರು – ವಿಶ್ವಾಸಿಗಳು.

ಇವರ ಸಂಖ್ಯೆಯು ಅಧಿಕವಾಗಿದೆ. ಏಕೆಂದರೆ "ಕರೆಯಲ್ಪಟ್ಟವರು ಅನೇಕರು" ಎಂದು ಓದುತ್ತೇವೆ.
ಬಹುಭಾಗ ಕ್ರೈಸ್ತರು ಎಲ್ಲಾ ಸಭೆಯ ಜನರು ಈ ವರ್ಗಕ್ಕೆ ಸೇರಿರುತ್ತಾರೆ!

ಈಗ ನಾವು ಮೂರನೆಯ ವರ್ಗವನ್ನು ಕುರಿತು ನೋಡೋಣ –





ಸಭೆಯ ಈ **ಎರಡು** ಭಾಗಗಳನ್ನು ನಾವು **'M'** ಸಮತಳದಲ್ಲಿ ನೋಡಬಹುದು.

**ಈಗ 'M' ಸಮತಳ ಎಂದರೇನು?**

ಇದು 'n' ಸಮತಳದ ಮೇಲಿದೆ ಮತ್ತು 'L' ಸಮತಳದ ಕೆಳಗಿದೆ.

'L' ಸಮತಳವು ಆತ್ಮೀಕ ಸ್ವಭಾವದಲ್ಲಿರುವ ಪರಲೋಕ ಸೃಷ್ಟಿಗಳನ್ನು ಸೂಚಿಸುತ್ತದೆ. ವಿವಿಧ ದೂತರು, ಕೆರೂಬಿಯರು, ಸೆರಾಫಿಯರು ಪರಲೋಕದ ಆತ್ಮೀಕ ಸೃಷ್ಟಿಗಳು!

ಆದ್ದರಿಂದ ಸಮತಳ 'm' ಎಂಬುದು ಪರಿಪೂರ್ಣವಾಗಿ ನೀತಿವಂತರೆಂಬ ನಿರ್ಣಯ ಹೊಂದಿರುವ ಮಾನವ ಸಮತಳ ಮತ್ತು ಪರಲೋಕದ ಆತ್ಮೀಕ ಸಮತಳದ ನಡುವೆ ಇದೆ. ಇದು ಶರೀರ ಸ್ವಭಾವವನ್ನು ತ್ಯಾಗ ಮಾಡಿರುವ ಕ್ರೈಸ್ತರನ್ನು ಸೂಚಿಸುತ್ತದೆ.
ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

**ರೋಮಾಪುರದವರಿಗೆ 12:1**

**"...ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಗೆಯಾಗಿಯೂ ಇರುವ ಸಜೀವ ಯಜ್ಞವಾಗಿ ಅರ್ಪಿಸಿರಿ"**

ಹೌದು! ಸಮತಳ 'm' ನಲ್ಲಿರುವವರನ್ನು "ನೂತನ ಸೃಷ್ಟಿ" ಎಂದು ಕರೆಯಲಾಗಿದೆ ಮತ್ತು ಶರೀರದಲ್ಲಿರುವ ಆತ್ಮೀಕ ಸ್ವಭಾವದವರು, ಪುನರುತ್ಥಾನದಲ್ಲಿ ಪರಲೋಕದ ಆತ್ಮೀಕ ಶರೀರವನ್ನು ಪಡೆದುಕೊಳ್ಳುವರು.

**ಹೌದು! "ಯಜ್ಞದ ಮೂಲಕ ಒಡಂಬಡಿಕೆ" ಮಾಡುವುದಕ್ಕೆ ಪ್ರತಿಷ್ಟೆ ಅಥವಾ ಸಮರ್ಪಣೆಮಾಡಿಕೊಳ್ಳುವವರ ಸ್ಥಿತಿಯು ಹೀಗಿರುತ್ತದೆ. ಮತ್ತು ದೀಕ್ಷಾಸ್ನಾನದ ಮೂಲಕ ಸಾಂಕೇತಿಸಲಾಗಿದೆ**

ಇವರೇ "ಅರಿಸಲ್ಪಟ್ಟ" ವರ್ಗದ ಕ್ರೈಸ್ತರು ಮತ್ತು "ಕರೆಯಲ್ಪಟ್ಟ" ವರ್ಗದ ವಿಶ್ವಾಸಿಗಳಿಗೆ ಹೋಲಿಸುವಾಗ ಇವರು ಸ್ವಲ್ಪ ಜನರೆಂದು ಬರೆದಿದೆ.

**ಮತ್ತಾಯ** 22:14 – **"...ಆಯಲ್ಪಟ್ಟವರು ಸ್ವಲ್ಪ ಜನ ಅಂದನು"**

ಆದ್ದರಿಂದ 'm' ಮತ್ತು 'n' ಎಂಬುದು ಆಯಲ್ಪಟ್ಟ ಸಭೆಯ ವರ್ಗವನ್ನು ಸೂಚಿಸುತ್ತದೆ.

**ಹೌದು! ಇವರೇ ಯೇಸುವನ್ನು "ಹಿಂಬಾಲಿಸುವವರು"**

ಇವರು ಸಾಧಾರಣ "ವಿಶ್ವಾಸಿಗಳಲ್ಲ" ಆದರೆ ಕ್ರಿಸ್ತೀಯ ಬೆಳವಣಿಗೆಯಲ್ಲಿ ಯಜಮಾನನ ಶಿಷ್ಯರಾಗಲು ಇನ್ನೂ **ಒಂದು ಹೆಜ್ಜೆ ಮುಂದೆ** ಹೋಗಿದ್ದಾರೆ.




**ಆದರೆ ಇವರಲ್ಲಿ ಎರಡು ವರ್ಗಗಳೇಕೆ?**

**ಇದಕ್ಕೆ ಅರ್ಥವೇನು?**

ಈ ಪ್ರಶ್ನೆಗಳಿಗೆ ಉತ್ತರವನ್ನು ವಿವರವಾಗಿ ಮುಂದಿನ ತರಗತಿಯ ಭಾಗ–2ರಲ್ಲಿ ಅಭ್ಯಾಸ ಮಾಡಲಿದ್ದೇವೆ.

"ಆಮೆನ್"






For Private Circulation Only

NOT FOR SALE

Jesus Loves Ministry

For free indepth Bible study contact

Br.Raju 8867768876

# 1, BETHESDA, 1st floor, Janani Enclave, 1st cross,
Thiglarapalya Andrahalli Main Rd, B'lore 560058

Email : rajudawn@yahoo.com

YouTube SUBSCRIBE TO OUR CHANNEL

Available Languages : Kannada, English, Hindi, Tamil and Telugu